ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ``2000ದ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಪೌರ ನಿಗಮಗಳ(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

X

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕ, 2000 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, "2000ದ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು" ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2000ದ ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

X X

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

4.50 ಪಿ.ಎಂ

ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, ೨೦೦೦

ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, "2000ರ ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

X ಅನುಬಂಧ I XX ಅನುಬಂಧ II

ಪ್ರಸ್ತಾವವನ್ನು ಮಂಡಿಸಲಾಯಿತು

+ ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಾವು ಈ ವಿಧೇಯಕವನ್ನು ಯಾವ ಉದ್ದೇಶಕ್ಕೋಸ್ಕರ ಮಂಡನೆ ಮಾಡಿದ್ದೇವೆಂದರೆ, ಬಹುಶಃ ತಮ್ಮೆಲ್ಲರಿಗೂ ಗೊತ್ತಿರುವಂತೆ, ನಮ್ಮ ರಾಜ್ಯದಲ್ಲಿ ಸುಮಾರು 45 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿಯನ್ನು ಒಳಪಡಿಸುವ ಸಾಧ್ಯತೆ ಇದೆ. ಈಗಾಗಲೇ ನೀರಾವರಿ ಸಾಮರ್ಥ್ಯವನ್ನು 17.41 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಕ್ರಿಯೇಟ್ ಮಾಡಿದ್ದೇವೆ. ವಾಸ್ತವಿಕವಾಗಿ ನಾವು ಭೂಮಿಗೆ ಈ ಸಾಮರ್ಥ್ಯವನ್ನು 15.77ಲಕ್ಷ ಹೆಕ್ಟೇರ್ ಕ್ರಿಯೇಟ್ ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಈಗಾಗಲೇ ಸುಮಾರು 35 ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿದ್ದೇವೆ. ರಾಜ್ಯದಲ್ಲಿ ಸುಮಾರು 40 ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳು ಈಗಾಗಲೇ ಪ್ರಾರಂಭವಾಗಿ ವಿವಿಧ ಹಂತದಲ್ಲಿವೆ. 1999-2000ನೇ ಸಾಲಿನಲ್ಲಿ ಅಂದರೆ ಇಲ್ಲಿಯವರೆವಿಗೂ ಒಟ್ಟಾರೆ ನಾವು ಏರಿಯಾ ನೋಟಿಫೈ ಮಾಡಿರುವುದು 18.43 ಲಕ್ಷ ಹೆಕ್ಟೇರ್ ಭೂಮಿ. ನೀರಾವರಿ ನಿರ್ವಹಣೆಯಲ್ಲಿ ಸಾಕಷ್ಟು ಅಸಂತೃಪ್ತಿಯನ್ನು ರೈತರು ವ್ಯಕ್ತ ಮಾಡುವಂಥದ್ದು ಹಾಗೂ ತುದಿ ಭಾಗದಲ್ಲಿ ಬರುವ ರೈತರಿಗೆ ಸರಿಯಾಗಿ ನೀರು ಸಿಗದೇ ಇರತಕ್ಕಂಥದ್ದು, ನೀರು ಸೋರಿಕೆಯಾಗತಕ್ಕಂಥದ್ದು, ಹಲವು ಕಡೆ ಹೆಚ್ಚು ನೀರು ಉಪಯೋಗಿಸಿದ್ದಕ್ಕೆ ಸೌಳು ಬರುತ್ತದೆ ಎನ್ನುವ ಸಮಸ್ಯೆ ಉದ್ಭವವಾಗಿರುವಂಥದ್ದು, ಮೇಲಿಂದ ಮೇಲೆ ಸಣ್ಣ ಪುಟ್ಟ ವಿತರಣೆ ನಾಲೆ ಒಡೆದು ಹೋಗಿರುವಂಥದ್ದು, ಇದರಿಂದಾಗಿ ರೈತರಿಗೆ ಸರಿಯಾದ ಫಸಲು ಬಾರದೇ ರೈತರು ನಷ್ಟಕ್ಕೊಳಗಾಗಿ ಕಂಗಾಲಾಗಿರತಕ್ಕಂಥದ್ದನ್ನು ನಾವು ಎದುರಿಸಿದ್ದೇವೆ. ಇದರ ಕಾರಣಗಳನ್ನು ನಾವು ಪತ್ತೆ ಹಚ್ಚುವುದಕ್ಕೆ ಹೋದರೆ, ನೀರಾವರಿ ನಿರ್ವಹಣೆಯಲ್ಲಿ ಸುಧಾರಣೆ ಆಗಬೇಕು, ಈ ಕೆಲಸವನ್ನು ಕೇವಲ ಸರಕಾರಿ ಅಧಿಕಾರಿಗಳು, ಅಭಿಯಂತರರು, ಮಾಡುವುದಕ್ಕೆ ಮಾತ್ರ ಸಾಧ್ಯ ಎಂದರೆ ಬಹುಶಃ ಈ ಮಾತನ್ನು ನಾವು ಯಾರು ಒಪ್ಪುವುದಿಲ್ಲ. ಈ ದೊಡ್ಡ ಕ್ಷೇತ್ರದಲ್ಲಿ ಯಾರು ಇದರ ನೀರನ್ನು ಪಡೆದು ಉಪಯೋಗ ಪಡೆದುಕೊಂಡಿರುತ್ತಾನೋ ಅವನ ಸಹಭಾಗಿತ್ವದಲ್ಲಿ ಮಾತ್ರ ನೀರಿನ ನಿರ್ವಹಣೆಯನ್ನು ಸರಿಯಾಗಿ ಮಾಡುವುದು ಸಾಧ್ಯ ಎನ್ನುವ ಹಿನ್ನೆಲೆಯಲ್ಲಿ, ನೀರಾವರಿಯ ರೈತರಿಗೆ ಜವಾಬ್ದಾರಿ ವಹಿಸಬೇಕು, ಇವರನ್ನು ಇದರಲ್ಲಿ ಅಧಿಕಾರೇತರರನ್ನಾಗಿಸಬೇಕು, ರೈತರಿಗೆ ವಿಶೇಷವಾದ ಅಧಿಕಾರವನ್ನು ಕೊಡಬೇಕು ಎನ್ನುವ ನಮ್ಮ ಸರ್ಕಾರದ ಚಿಂತನೆಯಿಂದ ಹೊಸ ಕಾನೂನು ತರಬೇಕು, ನೀರಾವರಿ ಬಳಕೆದಾರರ ಸಹಕಾರ ಸಂಘಗಳನ್ನು ತರಬೇಕು ಆ ಮೂಲಕ ರೈತರಿಗೆ ವಿಶೇಷ ಅಧಿಕಾರ ಕೊಟ್ಟು ಅವರನ್ನು ಅಧಿಕಾರೇತರರನ್ನಾಗಿಸಬೇಕು ಎನ್ನುವ ನಮ್ಮ ಚಿಂತನೆಯಿಂದ ಈ ಒಂದು ಕಾನೂನನ್ನು, ಸಭೆಯ ಮುಂದೆ ತಂದಿದ್ದೇವೆ. ಈ ಸಂಸ್ಥೆಗಳಿಗೆ ನೀರಾವರಿ ಕಾಮಗಾರಿಗಳ ನಿಯಂತ್ರಣದ ಜವಾಬ್ದಾರಿ ಹಾಗೂ ನಿರ್ವಹಣೆಯ ಜವಾಬ್ದಾರಿ ಹಾಗೂ ಮೇಲ್ವಿಚಾರಣೆಯ ಕೆಲಸವನ್ನು ಈ ಸಂಘಗಳಿಗೆ ಕೊಡಬೇಕೆನ್ನುವ ನಮ್ಮ ಉದ್ದೇಶವಿದೆ. ಕಾಲುವೆಯಾಗಲಿ, ಚರಂಡಿಗಳಿಗೆ, ದಾಟುವ ಸಾಧನಗಳಿಗಾಗಲಿ, ಇವುಗಳಿಗೆ ಅಡೆ-ತಡೆ ಉಂಟಾಗದಂತೆ ಮಾಡಲು ಅಡಿಗಾಲುವೆಗಳಾಗಲಿ, ಇವುಗಳನ್ನು ನಿರ್ಮಿಸತಕ್ಕಂಥ ಅಧಿಕಾರಿ ಹಾಗೂ ಬಳಕೆದಾರರಿಂದ ಕ್ಷೇತ್ರ ಕಾಲುವೆಗಳ ದುರಸ್ತಿ ಕಾರ್ಯ ಹಾಗೂ ಸಾಧ್ಯವಾದರೆ ವಿತರಣಾ ನಾಲೆಗಳನ್ನು ದುರಸ್ತಿ ಮಾಡಿಸುವಿಕೆ, ಈ ಎಲ್ಲಾ ಕೆಲಸಗಳನ್ನು ಈ

ಸಂಘಕ್ಕೆ ವಹಿಸಿಕೊಡಲಾಗುತ್ತದೆ. ಇದರ ಜೊತೆಗೆ ನೀರಾವರಿ ಕಾಮಗಾರಿಯಿಂದ ಲಭ್ಯವಾಗುವ ನೀರು ಸರಬರಾಜಿನ ನಿಯಂತ್ರಣಕ್ಕಾಗಿ ನೀರು ಬಳಕೆದಾರರ ಯೋಜನೆಯ ಮಟ್ಟದ ಒಕ್ಕೂಟವನ್ನು ಸಹಿತ ನಿರ್ಮಿಸಬೇಕು. ಶೃಂಗ ಸಂಸ್ಥೆಯನ್ನು ನಿರ್ಮಿಸಿ, ಅಪೆಕ್ಸ್ ಫಾರಮರ್ಸ್ ಇನ್‌ಸ್ಟಿಟ್ಯೂಷನ್ ಎಂದು ಮಾಡಿ, ಇದು ಸರ್ಕಾರಕ್ಕೂ ಕೂಡ ನೀರಾವರಿ ವಿಷಯದಲ್ಲಿ ಮಾರ್ಗದರ್ಶನ ಮಾಡಬೇಕು. ಬೇರೆ ಬೇರೆ ಮಟ್ಟದಲ್ಲಿ ಏನೇನು ಕೆಲಸಗಳನ್ನು ತೆಗದುಕೊಳ್ಳಬೇಕು ಎನ್ನುವ ವಿಚಾರದಲ್ಲಿ ಸರ್ಕಾರಕ್ಕೆ ಸಲಹೆಗಳನ್ನು ಕೊಡಬೇಕೆನ್ನುವ ಉದ್ದೇಶದಿಂದ ಈ ಶೃಂಗ ಸಂಸ್ಥೆಯನ್ನು ಸ್ಥಾಪಿಸಬೇಕು ಎನ್ನುವುದು ಈ ಹೊಸ ಕಾನೂನಿನ ಉದ್ದೇಶವಾಗಿದೆ. ಸಹಕಾರಿ ಸಂಘದ ಮೂಲಕ, ಇವತ್ತೇನು ನೀರಾವರಿ ಕರ ವಸೂಲಿ ಅಂದರೆ ನೀರಿನ ಕರ ವಸೂಲಿ ಎನ್ನುವುದು ಇಲ್ಲವೇ ಇಲ್ಲ ಎನ್ನುವ ಮಟ್ಟಕ್ಕೆ ಇದೆ. ನಿರ್ವಹಣೆ ವೆಚ್ಚದ ಶೇಕಡ ಐದರಷ್ಟು ಹಣ ಕೂಡ ಈ ಮೂಲದಿಂದ ಬರುತ್ತಿಲ್ಲ. ಇದು ಸಹಿತ ಸುಧಾರಣೆಯಾಗಬೇಕು, ಹೆಚ್ಚಿನ ಅಡ್ಮಿನಿಸ್ಟ್ರೇಷನ್ ಕಾಸ್ಟ್ ಇಲ್ಲದೆ ಆ ಹಣ ಸರಕಾರಕ್ಕೆ ಬರಬೇಕು ಎನ್ನುವುದೆ ನಮ್ಮ ಉದ್ದೇಶವಾಗಿದೆ. ಅನೇಕ ಕಡೆ ತುದಿಗೆ ಬರುವ ರೈತರ ಜಗಳವನ್ನು ಕಾಣುತ್ತಿರುತ್ತೇವೆ, ಇಂತ ವಿವಾದಗಳು ಬಂದಾಗ ಸಂಸ್ಥೆಯ ಮಟ್ಟದಲ್ಲಿಯೇ ರಾಜಿಗೊಳಿಸತಕ್ಕಂಥ ಕೆಲಸ ಆಗಬೇಕು ಎನ್ನುವ ಕಾರಣಕ್ಕೆ ಈ ಕಾನೂನಿನಲ್ಲಿ ಅವಕಾಶವನ್ನು ಕಲ್ಪಿಸಿದ್ದೇವೆ. ಈ ಕಾನೂನಿನ ಮೂಲಕ ರೈತರನ್ನು ಅಧಿಕಾರಯುತರನ್ನಾಗಿ ಮಾಡುತ್ತೇವೆ. ಇಲ್ಲಿಯವರೆಗೆ ನಿರ್ವಹಣೆಯ ಜವಾಬ್ದಾರಿ ನೀರಾವರಿ ಇಲಾಖೆಯ ಮೇಲೆ ಇರುವುದನ್ನು ತಪ್ಪಿಸಿ ಇಂಥ ಗುರುತರ ಜವಾಬ್ದಾರಿಯನ್ನು ಈ ಸಂಘಕ್ಕೆ ಕೊಡುವುದರ ಮೂಲಕ ರೈತರನ್ನು ಜವಾಬ್ದಾರಿಯನ್ನಾಗಿಸುತ್ತೇವೆ. ಈ ಕಾನೂನಿನ ಮೂಲಕ, ಈ ರಾಜ್ಯದಲ್ಲಿ ಶೇಕಡ 20ರಿಂದ 40ರಷ್ಟು ನೀರು ಏನು ಪೋಲಾಗುತ್ತಿತ್ತೋ ಅದನ್ನು ಕಡಿಮೆ ಪ್ರಮಾಣದಲ್ಲಿ ಪೋಲಾಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಕಾಲುವೆಯ ಕೊನೆ ಹಂತದಲ್ಲಿರುವ ರೈತರಿಗೆ ಸರಿಯಾದ ಪ್ರಮಾಣದಲ್ಲಿ ನೀರು ಸಿಗತಕ್ಕಂಥ ವ್ಯವಸ್ಥೆಯಾಗುತ್ತದೆ. ಇದರ ಜೊತೆಗೆ ನೀರನ್ನು ಉಪಯೋಗಿಸಿಕೊಳ್ಳುವ ಸಂದರ್ಭದಲ್ಲಿ ರೈತರಿಗೆ ಜವಾಬ್ದಾರಿಯಿಂದ ಕೆಲಸ ಮಾಡುವಂಥ ನಿರ್ಮಲವಾದ ವಾತಾವರಣವನ್ನು ಸೃಷ್ಟಿ ಮಾಡಿದ ಹಾಗೆ ಆಗುತ್ತದೆ. ಈ ಹೊಸ ಕಾನೂನನ್ನು, ಚಿಂತನೆಯನ್ನು, ತಾವುಗಳು ದಯಮಾಡಿ ಒಪ್ಪಿಕೊಂಡು ಇದನ್ನು ಪಾಸ್ ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಇದರ ಬಗ್ಗೆ ಚರ್ಚೆ ನಡೆದಂಥ ಸಂದರ್ಭದಲ್ಲಿ ಎಲ್ಲೆಲ್ಲಿ ಅಭಿವೃದ್ಧಿಯಾಗಿರುತ್ತದೆಯೋ ಅಲ್ಲಿ ಮಾತ್ರ ಸಹಕಾರಿ ಸಂಸ್ಥೆಗಳನ್ನು ರಚಿಸುವುದಕ್ಕೆ ಮುಂದೆ ಬರುತ್ತಾರೆ, ಎಲ್ಲಿ ಸಹಕಾರ ಕ್ಷೇತ್ರ ಅಷ್ಟೊಂದು ಪ್ರಮಾಣದಲ್ಲಿ ಬೆಳೆದಿಲ್ಲ ಅಲ್ಲಿ ಮಾತ್ರ ರೈತರು ಮುಂದೆ ಬರುವುದಿಲ್ಲ ಎನ್ನುವ ಅನಿಸಿಕೆಗಳು, ಆತಂಕಗಳು, ಅನೇಕ ನನ್ನ ರೈತಾಪಿ ಮಿತ್ರರು, ನನ್ನ ಸಹೋದ್ಯೋಗಿಗಳು, ರೈತಾಪಿ ನಾಯಕರುಗಳು ವ್ಯಕ್ತ ಮಾಡುತ್ತಿದ್ದರು. ಆದರೆ, ವಾಸ್ತವಿಕವಾಗಿ ಹೇಳುವುದಾದರೆ, ಕಳೆದ 4-5 ತಿಂಗಳುಗಳಲ್ಲಿ ನಡೆದಿರತಕ್ಕಂಥ ಅಭಿವೃದ್ಧಿಯನ್ನು ನೋಡಿದರೆ, ಕಾವೇರಿ ಬೇಸಿನ್ ಒಳಗಡೆನೇ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಈ ಸಂಘಗಳ ನೋಂದಣಿ ಕೆಲಸ ಹಾಗೂ ಈ ಸಂಘಗಳನ್ನು ಸಂಘಟನೆ ಮಾಡಬೇಕು ಎಂದು ಜನ ಮುಂದೆ ಬರುತ್ತಿದ್ದಾರೆ. ಇಂಥ ತೀವ್ರವಾದ ಆಸಕ್ತಿಯನ್ನು ನೋಡಿದಾಗ ನಮಗೆ ಬಹಳ ಸಂತೋಷವೆನಿಸುತ್ತದೆ. ನಾವು ಈಗಾಗಲೇ ಸುಮಾರು 780 ಸಂಘಸಂಸ್ಥೆಗಳನ್ನು ರಚನೆ ಮಾಡಿ ಕೆಲಸವನ್ನು ಪ್ರಾರಂಭ

ಮಾಡಿದ್ದೇವೆ. ಈ ಸಹಕಾರಿ ಸಂಸ್ಥೆಗಳಿಗೆ ಸಹಾಯ ಹಾಗೂ ಅನುಕೂಲ ಮಾಡಿಕೊಡುವುದಕ್ಕೆ ನ್ಯಾಷನಲ್ ಕೋ ಆಪರೇಟಿವ್ ಡೆವಲಪ್‌ಮೆಂಟ್ ಕೌನ್ಸಿಲ್‌ನವರು ಇದರ ಬಗ್ಗೆ ವಿಶೇಷವಾದ ಆಸಕ್ತಿಯನ್ನು ತೋರಿಸಿದ್ದಾರೆ. ನಾವು ಇಲ್ಲಿಯವರೆಗೆ ಒಟ್ಟು 780 ಸಂಸ್ಥೆಗಳನ್ನು ರಚಿಸಿ, ಒಟ್ಟು ಚೀಫ್ ಪ್ರಮೋಟರ್ ಅಪಾಯಿಂಟ್‌ಮೆಂಟ್ಸ್ 1049 ಸಂಸ್ಥೆಗಳಿಗೆ ಆಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.2435ಸಂಸ್ಥೆಗಳನ್ನು ನಾವು ಹುಟ್ಟುಹಾಕಬೇಕಾಗುತ್ತದೆ. ಪ್ರತಿಯೊಂದು ನೀರು ಬಳಕೆದಾರರ ಸಂಘದ ವ್ಯಾಪ್ತಿ 1000 ದಿಂದ 1500 ಎಕರೆಯಾಗುತ್ತದೆ. ಇದಾದನಂತರ ಅವುಗಳೆಲ್ಲವನ್ನು ನಾವು ಪ್ರಾಥಮಿಕ ಘಟಕಗಳೆಂದು ಇಡುತ್ತೇವೆ. ಆ ಸಂಸ್ಥೆಗಳೆಲ್ಲ ಡಿಸ್ಟ್ರಿಬ್ಯೂಟರಿ ಫೆಡರೇಷನ್‌ಗೆ ಅವು ಮೆಂಟರ್ಸ್ ಆಗುತ್ತದೆ. ಡಿಸ್ಟ್ರಿಬ್ಯೂಷನ್ ಫೆಡರೇಷನ್‌ನವರು ಆ ಪ್ರಾಜೆಕ್ಟ್ ಲೆವೆಲ್ ಸಂಸ್ಥೆಗಳಿಗೆ ಸದಸ್ಯರಿರುತ್ತಾರೆ. ಒಟ್ಟು ಎಲ್ಲಾ ರಾಜ್ಯದ ಪ್ರಾಜೆಕ್ಟ್‌ಗಳು ಕೂಡ ಒಂದು ಶೃಂಗಸಂಸ್ಥೆ ಅಪೆಕ್ಸ್ ಲೆವೆಲ್ ಇನ್ಸ್‌ಸ್ಟಿಟೂಷನ್ ನಂತೆ ಸ್ಥಾಪನೆಯಾಗುತ್ತದೆ. ಇದರ ಮೂಲಕ ನಮ್ಮ ಒಟ್ಟು ನೀರಾವರಿ ನಿರ್ವಹಣೆಯಲ್ಲಿ ರೈತರ ಪಾಲ್ಗೊಳ್ಳುವಿಕೆ ಬಹಳಷ್ಟು ಹೆಚ್ಚಾಗುತ್ತದೆ. ಅದರ ಮೂಲಕ ನಾವು ನೀರಾವರಿ ನಿರ್ವಹಣೆಯನ್ನು ಸಮರ್ಪಕವಾಗಿ ಮಾಡುವುದಕ್ಕೆ ಸಾಧ್ಯ ಎನ್ನುವಂತಹ ಒಂದು ತಾತ್ವಿಕ ಹಿನ್ನೆಲೆಯೊಳಗೆ ಈ ಒಂದು ಕಾನೂನನ್ನು ತಂದಿದ್ದೇವೆ. ದಯಮಾಡಿ ಈ ಸದನ ಈ ಬಿಲ್ಲನ್ನು ಪರ್ಯಾಲೋಚಿಸಿ ಅದನ್ನು ಪಾಸು ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮ್‌ಗಲ್) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿರುವಂತಹ ಈ ಸಹಕಾರ ಸಂಘಸಂಸ್ಥೆಗಳನ್ನು ಸ್ಥಾಪನೆ ಮಾಡುವಂತಹ ಕಾರ್ಯಕ್ರಮ ಏನು ಇದೆ, ಇದಕ್ಕನುಗುಣವಾಗಿ ಇವತ್ತು ಕಾಡಾ ಇದೆ. ಈಗಾಗಲೇ ದೊಡ್ಡ ದೊಡ್ಡ ಕಾಡಾ ಇದೆ. ಆ ಕಾಡಾ ಏನಾಗುತ್ತದೆ ಅದನ್ನು ಬಿಟ್ಟು ಕೊಳ್ಳುವುದಕ್ಕೆ ನೀವು ತಯಾರಿದ್ದೀರಾ ಅಥವಾ ಇಲ್ಲವಾ? ಇದನ್ನು ನೋಡಿದರೆ ಆಧುನಿಕವಾದಂತಹ ವಿಧಾನಗಳ ರೀತ್ಯಾ ನೀರನ್ನು ಬಳಕೆ ಮಾಡುವಂಥ ಕ್ರಮ ಪ್ರಪಂಚದಲ್ಲಿ ಈಗಾಗಲೇ ಬಂದಿದೆ ಇದಕ್ಕೆ ಸಂಬಂಧಪಟ್ಟಂತೆ ತಾವು ಎಲ್ಲೂ ಸಹ ಸೂಚನೆಯನ್ನು ಮಾಡಿಲ್ಲ. ನೀವು ಕೇವಲ ನೀರನ್ನು ಹಂಚಿಕೆ ಮಾಡತಕ್ಕಂಥದ್ದು ಮತ್ತು ವಸೂಲು ಮಾಡತಕ್ಕಂಥ ವಿಷಯದ ಬಗ್ಗೆ ಮಾತ್ರ ಪ್ರಸ್ತಾಪ ಮಾಡಿದ್ದೀರಿ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ನೀರಾವರಿಗೆ ಸಂಬಂಧಪಟ್ಟಂತೆ ಬೆಟರ್‌ಮೆಂಟ್ ಚಾರ್ಜ್ಸ್, ವಾಟರ್ ಟಾರ್ಗೆಟ್ ರೇಟ್‌ಗಳೆಲ್ಲ ಉಂಟು ಇದಕ್ಕೆ ಸಂಬಂಧಪಟ್ಟಂತೆ ಇನ್ನು ಎಷ್ಟು ಬಾಕಿ ಬರಬೇಕಾಗಿದೆ, ಅದನ್ನು ವಸೂಲು ಮಾಡುವುದರ ಬಗ್ಗೆ ತಾವು ನೀಡತಕ್ಕಂತಹ ವಿವರಣೆಯಲ್ಲಿ ಎಲ್ಲೂ ಸಹ ಪ್ರಸ್ತಾಪವನ್ನು ಮಾಡಿಲ್ಲ. ಇವತ್ತು ಮಾನ್ಯ ಸಚಿವರು ತೀವ್ರವಾದ ಪರಿಣಾಮವನ್ನುಂಟು ಮಾಡುವಂತಹ ಬಿಲ್ಲನ್ನು ಮಂಡಿಸಿದ್ದಾರೆ, ಇದರ ಬಗ್ಗೆ ಚರ್ಚೆಯನ್ನು ನಂತರ ತೆಗೆದುಕೊಳ್ಳುವುದು ಸೂಕ್ತವೆಂದು ನಾನು ಭಾವಿಸಿದ್ದೇನೆ. ನಾವು ಈ ಬಿಲ್ಲಿನ ಬಗ್ಗೆ ತೀವ್ರವಾಗಿ ಅಧ್ಯಯನವನ್ನು ಮಾಡಬೇಕಾಗಿದೆ. ಇದರ ಬಗ್ಗೆ ಚರ್ಚೆಯನ್ನು ಬರುವ ವಾರದಲ್ಲಿ ತೆಗೆದುಕೊಳ್ಳಬೇಕೆಂಬುದು ನನ್ನ ಸಲಹೆಯಾಗಿದೆ. ಅದಕ್ಕೆ ಮೊದಲು ಇದರ ಬಗ್ಗೆ ಮಾನ್ಯ ಸಚಿವರು ವಿವರಣೆಯನ್ನು ಕೊಟ್ಟರೆ ಸೂಕ್ತವಾಗುತ್ತದೆ. ಇದರಿಂದಾಗಿ ನಮ್ಮ ತಿಳುವಳಿಕೆಯ ಮಟ್ಟವು ಸ್ವಲ್ಪ ಹೆಚ್ಚಾಗುತ್ತದೆ, ಇದರ ಬಗ್ಗೆ ತಿಳುವಳಿಕೆಯನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ನೀರಾವರಿ ಸಚಿವರು ಹೇಳಿರತಕ್ಕಂಥ ಆಸೆಆಕಾಂಕ್ಷೆಗಳು ಸರಿಯಾಗಿದೆ. ಆದರೆ ಇದರ ಬಗ್ಗೆ ಅನೇಕ ರೈತಸಂಘಗಳು, ರೈತಾಪಿ

ಪ್ರತಿನಿಧಿಗಳು ಅನೇಕ ಸಂಶಯಗಳನ್ನು ವ್ಯಕ್ತಮಾಡಿರುವುದು ಸಾರ್ವಜನಿಕವಾಗಿ ತಮಗೆ ಈಗಾಗಲೇ ಗೊತ್ತಿದೆ. ಆದ್ದರಿಂದ ನಾನು ತಮ್ಮಲ್ಲಿ ಮನವರಿಕೆ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ಸೋಮವಾರ ಅಥವಾ ಮಂಗಳವಾರ ನಾವುಗಳು ಕುಳಿತುಕೊಂಡು ಚರ್ಚೆ ಮಾಡೋಣ. ನಿಮ್ಮ ಅಧಿಕಾರಿಗಳನ್ನು ಸಹ ಕರೆಸಿ, ಇದಾದನಂತರ ಈ ಬಿಲ್ಲನ್ನು ಪಾಸು ಮಾಡಿಕೊಡಲು ಪ್ರಯತ್ನ ಮಾಡುತ್ತೇವೆ. We have got some serious doubts and serious reservations about this bill.

ಶ್ರೀ ಹೆಚ್. ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಬೈರೇಗೌಡರು ಹೇಳಿರತಕ್ಕಂಥ ವಿಚಾರದಲ್ಲಿ ಇದು ಅವರಿಗೆ ಗೊತ್ತಿಲ್ಲದಿರುವ ವಿಚಾರವೇನು ಇಲ್ಲ. ಈ ಕಾಡಾ ಸಂಸ್ಥೆಗಳು ಮಾಡುವ ಚಟುವಟಿಕೆಗಳು ಬೇರೆ, ನಾವು ಈ ಸಂಸ್ಥೆಗಳನ್ನು ಹುಟ್ಟುಹಾಕುವುದರಿಂದ ಕಾಡಾ ಸಂಸ್ಥೆಗಳನ್ನು ಯಾವುದೇ ಕಾರಣಕ್ಕೂ ಅಶಕ್ತಿಗೊಳಿಸವುದಾಗಲಿ, ಅಥವಾ ಅವುಗಳನ್ನು ವೈಂಡ್‌ಅಪ್ ಮಾಡುವುದಾಗಲಿ ಅದು ನಮ್ಮ ಉದ್ದೇಶವಲ್ಲ. ನಮ್ಮ ಉದ್ದೇಶವೇನೆಂದರೆ ನಮ್ಮ ಯೋಜನೆಗಳಲ್ಲಿ ಮೇನ್‌ಟೆನೆನ್ಸ್ ಆಸ್ಪೆಕ್ಟ್‌ನಲ್ಲಿ ರೈತರನ್ನು ಪಾಲ್ಗೊಳ್ಳುವಂತೆ ಮಾಡುವುದು. CADA is for Command Area Development. They are named as Command Area Development Authorities because they are concerned only with command Area Development. ಅವರುಗಳು ಫೀಲ್ಡ್ ಚಾನಲ್‌ನ್ನು ಮಾಡುವ ಮಟ್ಟಕ್ಕೆ ಬರುತ್ತಾರೆ. ಅಲ್ಲಿಂದ ಮುಂದೆ ಅವರುಗಳ ಜವಾಬ್ದಾರಿಯಿರುವುದಿಲ್ಲ, ಅವರುಗಳು ಶಾಲೆ ಕಟ್ಟಿಸುವುದಕ್ಕೆ ಬರುತ್ತಾರೆ ಅಥವಾ ರಸ್ತೆಗಳನ್ನು ಮಾಡುವುದಕ್ಕೆ ಬರುತ್ತಾರೆ ಅವುಗಳಿಲ್ಲವು ಅವರ ವ್ಯಾಪ್ತಿಗೆ ಬರುತ್ತದೆ. ಒಮ್ಮೆ ಅವರು ಫೀಲ್ಡ್ ಚಾನಲ್‌ನ್ನು ಮಾಡಿದ ಮೇಲೆ ಕಾಡಾದವರು ಇವರ ವ್ಯಾಪ್ತಿಗೆ ಬರುವುದಿಲ್ಲ. ತಾವು ಎಷ್ಟು ಬಾಕಿಯಿರಬಹುದು ಎಂಬ ಮಾತನ್ನು ಕೇಳಿದಿರಿ ನಮ್ಮ ರಾಜ್ಯದೊಳಗೆ ಡಿಮ್ಯಾಂಡ್ ಬೆಟರ್‌ಮೆಂಟ್ ಲೆವಿಯನ್ನು ರೈಜ್ ಮಾಡುತ್ತೇವೆಯೋ ಅದರ ಶೇಕಡ 5ರಷ್ಟು ಸಹಿತ ವಸೂಲಿ ಇಲ್ಲ; ಇನ್ನು ಕಡಿಮೆ ಇದೆ. ಸುಮಾರು 1 ರಿಂದ 3 ಕೋಟಿ ರೂಪಾಯಿಗಳಷ್ಟು ಲೆಕ್ಕ ಬರುತ್ತದೆಯೇ ಹೊರತು, ಅದಕ್ಕಿಂತ ಹೆಚ್ಚು ಬರುವುದಿಲ್ಲವೆಂದು ನಿಮಗೆ ಗೊತ್ತಿದೆ. ನೀರಾವರಿ ಇಲಾಖೆಯವರು ಆ ಡಿಮ್ಯಾಂಡನ್ನು ರೈಜ್ ಮಾಡುತ್ತೇವೆ, ಅದನ್ನು ರೆವಿನ್ಯೂ ಇಲಾಖೆಯವರು ವಸೂಲು ಮಾಡಬೇಕು, ಡಿಮ್ಯಾಂಡ್‌ನ್ನು ರೈಜ್ ಮಾಡುವವರು ಮತ್ತು ವಸೂಲಿ ಮಾಡುವವರು ಒಬ್ಬೊಬ್ಬರು, ಹಾಗಾಗಿ ಯಾವುದೇ ಒಂದು ವ್ಯವಸ್ಥೆಯುತವಾಗಿ, ವೈಜ್ಞಾನಿಕವಾಗಿರತಕ್ಕಂತಹ ಪದ್ಧತಿ ನಮ್ಮಲ್ಲಿ ಇಲ್ಲ. ಅದನ್ನು ಧೃಡೀಕರಣ ಮಾಡಬೇಕೆನ್ನುವ ಉದ್ದೇಶ ಇದಾಗಿದೆ. ಈ ಎರಡು ವಿಷಯದ ಬಗ್ಗೆ ತಮಗೆ ಮನವರಿಕೆಯಾಯಿತು ಎಂದು ನಾನಂತು ವೈಯಕ್ತಿಕವಾಗಿ ಭಾವಿಸಿಕೊಳ್ಳುತ್ತೇನೆ, ಇದರ ಬಗ್ಗೆ ಎರಡು ಕಡೆ ಪತ್ರಿಕಾ ಹೇಳಿಕೆಗಳು ಈ ಸಂಸ್ಥೆಗಳ ಬಗ್ಗೆ, ಕಾನೂನಿನ ಬಗ್ಗೆ ವ್ಯತಿರಿಕ್ತವಾಗಿ ಬಂದಿರುವುದು ನಿಜ. ಗುಲ್ಬರ್ಗಾದಲ್ಲಿರತಕ್ಕಂತಹ ಕೆಲವು ರೈತನಾಯಕರು ಈ ಸಂಸ್ಥೆಗಳನ್ನು ಮಾಡುವುದರಿಂದ ಈ ಸಂಸ್ಥೆಗಳು ನೀರಾವರಿ ಇಲಾಖೆಯಲ್ಲಿರತಕ್ಕಂಥ ಅಧಿಕಾರವನ್ನು ಕಡಿಮೆ ಮಾಡಿಸುತ್ತಾರೆ. ಅದು ನಿಜ. ಈ ಸಂಸ್ಥೆಗಳನ್ನು ಮಾಡುವುದರ ಮೂಲಕ ನಾವು ನೀರಾವರಿ ಇಲಾಖೆಯಲ್ಲಿದ್ದಂತಹ ಅಧಿಕಾರವನ್ನು ವರ್ಗಾಯಿಸುತ್ತಿದ್ದೇವೆ. We are transferring

the power of the Irrigation Department to the farmers through these co-operatives. ಅವರು ಹೇಳುವಂತಹ ಆಪಾದನೆಗಳು ಅದಕ್ಕೆ ತಕ್ಕಹಾಗೆ ಇರತಕ್ಕಂತಹ ಉತ್ತರವು ಈ ಕಾನೂನು ಕೊಡುತ್ತದೆ. ಇದರ ಜೊತೆಗೆ ಇದರ ಬಗ್ಗೆ ನಾನು ಎರಡು ದಿವಸಗಳ ಹಿಂದೆ ಎರಡು ಪತ್ರಿಕೆಗಳಲ್ಲಿ ನೋಡಿದ್ದೇವೆ, ಡೆಕ್ಕನ್‌ಹೆರಾಲ್ಡ್‌ನಲ್ಲಿಯೂ ಸಹ ``Ryots oppose infusion of water co-operatives in co-operative Societies Act." ಇವರು ನನ್ನನ್ನು ಒಂದು ಗಂಟೆಯ ಕಾಲ ಭೇಟಿಯಾಗಿದ್ದರು ಅವರ ಜೊತೆ ನಾನು ಚರ್ಚೆಯನ್ನು ಮಾಡಿದ್ದೇನೆ. ನಮ್ಮ ಹಿರಿಯ ತಂತ್ರಜ್ಞರಾಗಿರುವಂತಹ ಶ್ರೀ ಭವಾನಿಶಂಕರ್‌ರವರು ಸಹ ಇವರ ಜೊತೆಯಲ್ಲಿ ಬಂದಿದ್ದರು. ಇದರ ಬಗ್ಗೆ ಸಾಕಷ್ಟು ಚರ್ಚೆಯಾದ ನಂತರ ಸಾಕಷ್ಟು ಜನ ಬಂದವರು. They have agreed with me, they have given some suggestions which we can include in the Rules. ಇದರ ಜೊತೆಗೆ ಅವರು ಏನು ಹೇಳುತ್ತಿದ್ದರೆಂದರೆ, ನಾವು ಏನು ಅಸೋಸಿಯೇಷನ್ ಸೊಸೈಟಿ ಎಂದು ಮಾಡಿಕೊಂಡಿದ್ದೇವೆಯೋ ಅದನ್ನು ನೀವು ಕೋ-ಆಪರೇಟಿವ್ ಸೊಸೈಟಿಯಾಗಿ ಕನ್‌ವರ್ಟ್ ಮಾಡುವುದಕ್ಕೆ ನಮಗೆ ಅವಕಾಶವನ್ನು ಮಾಡಿಕೊಡಬೇಕು. Yes, we are open for it. ನಾವು ಯಾವುದೋ ಒಂದು ಸೊಸೈಟಿಯನ್ನು ಮಾಡಿಕೊಂಡಿದ್ದರೆ, ಅಥವಾ ಅಸೋಸಿಯೇಷನ್‌ನ್ನು ಮಾಡಿಕೊಂಡಿದ್ದರೆ ಅದನ್ನು ನಾವು ಸಂಪೂರ್ಣ ನೆಗ್‌ಲೆಟ್ ಮಾಡುತ್ತೇವೆಂದಲ್ಲ, ಇದರ ಬಗ್ಗೆ ಮಾನ್ಯ ಬೈರೇಗೌಡರೆ, ತಮಗೆ ಗೊತ್ತಿದೆ, ಈ ಕೋ-ಆಪರೇಟಿವ್ ಸೊಸೈಟಿ ಅಥವಾ ಅಸೋಸಿಯೇಷನ್‌ನನ್ನು ಮಾಡಿಕೊಳ್ಳಬಹುದು ಎಂದು ನಿಮ್ಮ ಸರ್ಕಾರದವರು 1995-96ರಲ್ಲಿ ಒಂದು ತಿದ್ದುಪಡಿಯನ್ನು ತಂದಿದ್ದರು. ಆ ತಿದ್ದುಪಡಿಯ ಪ್ರಕಾರ ಆಗ ಸಹಕಾರ ಸಂಘಗಳನ್ನಾಗಲಿ ಅಥವಾ ನೀರು ಬಳಕೆದಾರರ ಸಂಘಗಳನ್ನು either societies to be registered under the Co-operative Societies act or under General Societies Registration Act. ರಿಜಿಸ್ಟರ್ ಮಾಡಬಹುದು ಎಂದು ಒಂದು ಕಾನೂನನ್ನು ಮಾಡಿದ್ದೀರಿ. ಆದರೆ ಅದು ಏನಾಯಿತೆಂದರೆ, ಆ ಅಸೋಸಿಯೇಷನ್, ಸೊಸೈಟಿ/ ರಿಜಿಸ್ಟ್ರೇಷನ್ ಆಕ್ಟ್‌ನ ಕೆಳಗಡೆ ಯಾರು ಮಾಡಲಿಲ್ಲ. ರೈತರು ಸಹ ಮುಂದೆ ಬರಲಿಲ್ಲ. ಅದಕ್ಕೆ ಮೋಟಿವೇಷನ್ ಇರುವುದಿಲ್ಲ, ಫೋಲೋಅಪ್ ಇರುವುದಿಲ್ಲ, ಇದಕ್ಕೆ ಹಲವಾರು ಕಾರಣಗಳಿರಬಹುದು, ಆದರೆ ನಾನು ಅದರ ಬಗ್ಗೆ ವಿವರವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಸ್ವಲ್ಪ ಮಟ್ಟಿನ ಅಸೋಸಿಯೇಷನ್‌ಗಳು ಅಂದರೆ 50 ರಿಂದ 100 ಆಗಿರಬಹುದು, ಅವುಗಳೆಲ್ಲವು ಕೂಡಿದರೆ ಕೋ-ಆಪರೇಟಿವ್ ಅಂಡ್ ಅಸೋಸಿಯೇಷನ್‌ಗಳು 150 ಆಗಿದ್ದವು. ಆ 150 ರೊಳಗಡೆ ಎಷ್ಟು ಅಸೋಸಿಯೇಷನ್, ಕೋ-ಆಪರೇಟಿವ್ ಸೊಸೈಟಿ ಇದೆ ಅವುಗಳನ್ನು ಕೋ-ಆಪರೇಟಿವ್ ಸೊಸೈಟಿಗಳಾಗಿ ಪರಿವರ್ತನೆ ಮಾಡುವುದಕ್ಕೆ ನಾವು ಅವಕಾಶವನ್ನು ಮಾಡಿಕೊಡುತ್ತೇವೆ. ಇದರ ಜೊತಗೆ ಯಾವುದೇ ಸಲಹೆ ಸೂಚನೆಗಳಿದ್ದರೆ ಅದನ್ನು ಕೇಳಿ ಮಾರ್ಪಾಡು ಮಾಡುವುದಕ್ಕೆ ಸರ್ಕಾರ ಸಿದ್ದವಿದೆ ಎನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ವಿರೋಧಪಕ್ಷ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರೆ, ಮಾನ್ಯ ಬೈರೇಗೌಡರವರೆ ಇದನ್ನು ನಾವು ಇವತ್ತೆ ಮಂಡಿಸಿರುವುದಿಲ್ಲ, ಈ ಬಿಲ್ಲನ್ನು 4-5 ದಿವಸಗಳ ಹಿಂದೆಯೇ ಸದನದಲ್ಲಿ ಮಂಡನೆ ಮಾಡಿದ್ದೆವು. This act is old now, because it was promulgated as

an ordinance. That is why, I appeal to the Hon'ble Members, kindly co-operate and pass this bill.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಂದಂತಹ ಬಿಲ್ಲಿನಲ್ಲಿ ಕೆಲವು ಒಳ್ಳೆಯ ಅಂಶಗಳು ಇವೆ. ನೀರಾವರಿಯ ನಿರ್ವಹಣೆಯ ಅವ್ಯವಹಾರವಾಗುತ್ತಿದೆ. ಯಾರಿಗೆ ಫಾಯಿದೆ ಮುಟ್ಟಬೇಕೋ ಅದು ಅವರಿಗೆ ಮುಟ್ಟುತ್ತಿಲ್ಲ. ಇದರಲ್ಲಿ ಕೆಲವೊಂದು ಲೋಪದೋಷಗಳಿವೆ, ಈ ರೀತಿ ಬಿಲ್ ತರುವುದರಿಂದ ಕೆಲವು ಲೋಪದೋಷಗಳಿವೆ. ಅದರಲ್ಲಿ ಯಾವುದು ಅಡ್ವಾನ್ಟೇಜ್ ಎನ್ನುವ ಬಗ್ಗೆ ವಿವರವಾಗಿ ಚರ್ಚೆ ಮಾಡುವುದು ಇದೆ. ಅದಕ್ಕೆ ಇಲ್ಲಿ ಬಿಲ್ ತೆಗೆದುಕೊಂಡು ಬಂದಿದ್ದರೆ ಚಲೋ ಇತ್ತು. ಆದರೆ ಮೊದಲೇ ಆರ್ಡಿನೆನ್ಸ್ ಹೊರಡಿಸಿದ್ದಾರೆ. ಈಗ ಸದನದಲ್ಲಿ ಬಿಲ್ಲನ್ನು ತೆಗೆದುಕೊಂಡು ಬಂದು ಡಿಸ್‌ಕಷನ್ ಮಾಡಿದ್ದರೆ ಹೆಚ್ಚಿಗೆ ಪ್ರಚಾರ ಸಿಗುತ್ತಿತ್ತು. ಒಳ್ಳೆಯ ಕೆಲಸ ಮಾಡುವಲ್ಲಿ ಕೆಲವೊಂದು ಲೂಪ್‌ಹೋಲ್ಸ್ ಇರುತ್ತವೆ. ಈಗ ಸಹಕಾರ ಸಂಘಗಳಿರಬಹುದು ಯಾವುದೇ ಇರಬಹುದು, ಅಲ್ಲಿ ರಾಜಕೀಯ ಹಿತಾಸಕ್ತಿಗಳು ಕಾಣಿಸುವುದಕ್ಕೆ ಪ್ರಾರಂಭವಾಗುತ್ತದೆ. ಸಹಕಾರ ಸಂಘಗಳು ನಮ್ಮ ಮೂಲ ಉದ್ದೇಶಕ್ಕೆ ಧಕ್ಕೆಯಾಗಬಾರದು. ರಾಜಕೀಯ ಹಿತಾಸಕ್ತಿಗಳ ಹಿಡಿತದಿಂದ ಮೂಲ ಉದ್ದೇಶಕ್ಕೆ ಧಕ್ಕೆಯಾಗುವ ಕೆಲವೊಂದು ಅಂಶಗಳು ಇದರಲ್ಲಿ ಕಾಣುತ್ತವೆ. ಅದು ಆಗಬಾರದು. ಮಾನ್ಯ ಬೈರೇಗೌಡರು, ಸಿಂಧ್ಯಾರವರು ಹೇಳಿದಹಾಗೆ ಹೆಚ್ಚಿನ ಡಿಸ್‌ಕಷನ್‌ಗೆ ಅವಕಾಶವಿದ್ದರೆ ಚೆನ್ನಾಗಿರುತ್ತಿತ್ತು. ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡಬೇಕು? ಇದರ ಚರ್ಚೆಯನ್ನು ಬೇಕಾದರೆ ಸೋಮವಾರ, ಮಂಗಳವಾರ ಇಟ್ಟುಕೊಳ್ಳಬಹುದು.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ವಿರೋಧಪಕ್ಷದ ನಾಯಕರೇ, ನಾವು ನೀವು ಸದನದಲ್ಲಿ ಚರ್ಚೆ ಮಾಡುವುದಲ್ಲ, ಸಾರ್ವಜನಿಕ ವೇದಿಕೆಗಳಲ್ಲಿ ಚರ್ಚೆ ಮಾಡಿದ್ದೇವೆ. ನಾಲ್ಕೈದು ತಿಂಗಳುಗಳಲ್ಲಿ 10-20 ಕಾರ್ಯಕ್ರಮಗಳಲ್ಲಿ ಇದರ ಬಗ್ಗೆ ನಾನು ಚರ್ಚೆ ಮಾಡಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಡಿಸ್‌ಕಷನ್ ಮಾಡಿ ನಂತರ ಇದನ್ನು ಪಾಸ್ ಮಾಡೋಣ. ಬಿಲ್ ಬೇಡವೆಂದು ನಾವು ಹೇಳುವುದಿಲ್ಲ. ಇದರಲ್ಲಿ ಒಳ್ಳೆಯ ಅಂಶಗಳು ಬಹಳಷ್ಟು ಇವೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ : ಮಾನ್ಯ ಅಧ್ಯಕ್ಷರೆ, ಮಾನ್ಯ ನೀರಾವರಿ ಸಚಿವರು ಇವತ್ತು ಏನು ಈವೊಂದು ಬಿಲ್ಲನ್ನು ತಂದಿದ್ದಾರೆ ಅದಕ್ಕೆ ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ಕೃಷ್ಣಾ ಜಲಭಾಗ್ಯ ನಿಗಮದ ವ್ಯಾಪ್ತಿಯಲ್ಲಿ ಬರತಕ್ಕ ಶಾಸಕನಾಗಿ ಅಲ್ಲಿ ಏನು ಅವ್ಯವಹಾರವಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅಲ್ಲಿ ನೀರಿನ ಪಾಲನೆ ಮತ್ತು ಪೋಷಣೆಯಲ್ಲಿ.....

ಶ್ರೀ ಜಗದೀಶ್ ಶೆಟ್ಟರ್ : ಈ ಬಿಲ್‌ನ ಮೇಲೆ ಡಿಸ್‌ಕಷನ್ ಕಂಟಿನ್ಯು ಮಾಡೋಣ ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು, ಸೋಮವಾರ ಅಥವಾ ಮಂಗಳವಾರ ಮಾತನಾಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ ಇದು ಆರ್ಡಿನೆನ್ಸ್ ರೀಪ್ಲೇಸ್ ಮಾಡುವ ಬಿಲ್. ಹೇಗೂ ಈಗ ಆರ್ಡಿನೆನ್ಸ್ ಇದೆ. ಕಾನೂನು ಪಾಸ್ ಮಾಡುವುದಕ್ಕೆ ಸರ್ಕಾರಕ್ಕೆ ಬಹುಮತ ಇದೆ. ಅದು ಪಾಸ್ ಆಗಿಯೇ ಆಗುತ್ತದೆ. ಹಿರಿಯ ಮುಖಂಡರುಗಳಾದ ಮಾನ್ಯ ಬೈರೇಗೌಡರು ಹಂಪನಗೌಡರು

ಮತ್ತು ನಾನು ಇದರ ಬಗ್ಗೆ ಇರತಕ್ಕ ಕೆಲವು ಸಂಶಯಗಳನ್ನು ಹೇಳಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಇದು ಪಾಸ್ ಆಗಲೇಬೇಕು. ಕೆಲವು ಕ್ಲಾರಿಫಿಕೇಶನ್ಸ್ ಕೇಳಬೇಕಾಗಿದೆ. ನಾವೇನು ಹೇಳುತ್ತೇವೆಂದರೆ, ಸೋಮವಾರ ಸಾಯಂಕಾಲ ನಿಮ್ಮ ಇಲಾಖೆಯ ಏಳೆಂಟು ಜನ ಅಧಿಕಾರಿಗಳನ್ನು ಕರೆಸಿ ಡಿಸ್‌ಕಷನ್ ಮಾಡೋಣ. ಮಂಗಳವಾರ ಪಾಸ್ ಮಾಡೋಣ. ಕೆಲವು ಡೌಟ್ಸ್‌ಗಳಿವೆ, ಕೆಲವು ಮಾಡಿಫಿಕೇಶನ್ಸ್ ಆಗಬೇಕಾಗಿದೆ ಅದಕ್ಕೋಸ್ಕರ ಹೇಳುತ್ತಿದ್ದೇವೆ ಇಲ್ಲಾ ಈಗಲೇ ಪಾಸ್ ಮಾಡಬೇಕೆಂದರೆ ಮಾಡೋಣ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್ : ಮಾನ್ಯ ಅಧ್ಯಕ್ಷರೆ, ಈವೊಂದು ಪಾಲನೆ ಪೋಷಣೆ ನಿರ್ವಹಣೆ ಕೆಲಸವನ್ನು ಸಹಕಾರ ಸಂಘಗಳ ಮೂಲಕ ಮಾಡಲಿಕ್ಕೆ ತಂದಿರತಕ್ಕ ಬಿಲ್‌ನ್ನು ನಾನು ಸ್ವಾಗತ ಮಾಡುತ್ತೇನೆ. ನಮ್ಮಲ್ಲಿ ಬರತಕ್ಕ ಕೃಷ್ಣಾ ಜಲಭಾಗ್ಯ ನಿಗಮದಲ್ಲಿ ನೀರಿನ ಪಾಲನೆ ಪೋಷಣೆ ಸುಮಾರು 1994-95, 1995-96ನೇ ಸಾಲಿನಲ್ಲಿ 25 ಕೋಟಿ ರೂಪಾಯಿ ಖರ್ಚು ಮಾಡಿದರೂ ಅಲ್ಲಿ ಯಾವ ಕೆಲಸವೂ ನಡೆದಿಲ್ಲ. ಅದರ ಬಗ್ಗೆ ಸಾಕಷ್ಟು ವಿಧಾನಸಭೆಯಲ್ಲಿ ಚರ್ಚೆಯಾಗಿದೆ. ವಿಧಾನಮಂಡಲದ ಅಂದಾಜು ಸಮಿತಿಯಲ್ಲಿ ಸಹ ಚರ್ಚೆ ಮಾಡಿದ್ದೇವೆ. ಈ ಎಲ್ಲಾ ಕಾರಣಗಳಿಂದ ಟೆಂಡರ್ ಮುಖಾಂತರ ನಡೆಯತಕ್ಕ ಕೆಲಸದ ವಿಷಯದಲ್ಲಿ ಇತ್ತೀಚೆಗೆ ಏನಾಗಿದೆ ಅಂದರೆ ಕೆಲಸವನ್ನು ಟೆಂಡರ್ ಮುಖಾಂತರ ಕೊಟ್ಟರೂ ಕೂಡ ರೈತರಿಗೆ ಅದರ ಲಾಭ ಮುಟ್ಟಲಾರದ ವ್ಯವಸ್ಥೆಯಾಗಿದೆ. ರೈತರು ತಮ್ಮ ಕಾಲುವೆಯ ಕೆಲಸವನ್ನು ತಾವೇ ಮಾಡಿಕೊಂಡು ನಿರ್ವಹಣೆ ಮಾಡತಕ್ಕದ್ದು ಒಳ್ಳೆಯ ಉದ್ದೇಶವಿದೆ. ಆದ್ದರಿಂದ ಶೀಘ್ರಗತಿಯಲ್ಲಿ ಈ ಬಿಲ್‌ನ್ನು ಪಾಸ್ ಮಾಡಬೇಕೆಂದು ಎಲ್ಲಾ ವಿರೋಧಪಕ್ಷದ ನಾಯಕರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೆ, ಇವತ್ತು ಭಾರಿ ನೀರಾವರಿ ಸಚಿವರು ನೀರಾವರಿ ಇಲಾಖೆಯ ಆಣೆಕಟ್ಟಿನ ವ್ಯಾಪ್ತಿಯಲ್ಲಿ ಬರತಕ್ಕ ಕಾನೂನಿಗೆ ನೀರು ಬಳಕೆದಾರರ ಸಂಘದ ಕಾನೂನಿಗೆ ತಿದ್ದುಪಡಿ ಮಸೂದೆಯನ್ನು ಸದನದಲ್ಲಿ ಮಂಡಿಸಿದ್ದಾರೆ. ಇದರಲ್ಲಿ ಅನೇಕ ವಿಚಾರಗಳನ್ನು ಸರ್ಕಾರ ಗಮನಿಸಬೇಕಾಗುತ್ತದೆ. ಏಕೆಂದರೆ ಹೊಸದಾಗಿ ಪ್ರಾರಂಭವಾಗತಕ್ಕ ಆಣೆಕಟ್ಟಿನಲ್ಲಿ ಈವೊಂದು ಕಾನೂನು ತಂದು ಮಾಡಿದರೆ ಅಲ್ಲಿರತಕ್ಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಬಹುದು. ಆದರೆ ತುಂಗಭದ್ರಾ ಜಲಾಶಯದ ವ್ಯಾಪ್ತಿಯಲ್ಲಿರತಕ್ಕ ಎಡದಂತೆ ನಾಲೆಯ ಕೆಳಗಡೆ ನಾಲ್ಕೂವರೆ ಲಕ್ಷದಿಂದ ಆರೂವರೆ ಲಕ್ಷದ ಎಕರೆ ಭೂಮಿ ನೀರಾವರಿ ಪ್ರದೇಶವಿರುತ್ತದೆ. ಅಲ್ಲಿ ಏನು ಸಮಸ್ಯೆಗಳು ಬರುತ್ತವೆಂದರೆ ನಾವು ಅಲ್ಪ ಮತ್ತು ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ವ್ಯವಸ್ಥೆ ಮಾಡಿಕೊಂಡಿರತಕ್ಕವರು. ಒಂದೊಂದು ಮೇನ್ ಡಿಸ್ಟ್ರಿಬ್ಯೂಟರಿ ಆನ್ ಅಂಡ್ ಆನ್ ಡಿಸ್ಟ್ರಿಬ್ಯುಟರೀಸ್‌ಗಳಿದಾವೆ. ನಾಲ್ಕು ರೊಟೇಶನ್ಸ್ ಡಿಸ್ಟ್ರಿಬ್ಯುಟರೀಸ್‌ಗಳು ಇದ್ದಾವೆ. ಅದರ ಕೆಳಗಡೆ ನೀರಾವರಿ ಬಳಕೆದಾರರ ಸಹಕಾರ ಸಂಘ ಮಾಡಿಕೊಂಡು ಹೋಗಬೇಕೆಂದರೆ ಕಷ್ಟವಾಗುತ್ತದೆ. ಕಳೆದ 30-35ವರ್ಷಗಳಿಂದ ಒಂದು ವ್ಯವಸ್ಥೆಯಲ್ಲಿ ನೀರಾವರಿ ಮಾಡಿಕೊಂಡು ಬಂದಿದ್ದಾರೆ. ಇಲ್ಲಿ ಗೊಂದಲವೆಂದರೆ ಮಾನ್ಯ ಸಚಿವರು ತಪ್ಪು ತಿಳಿದುಕೊಳ್ಳಬೇಡಿ. ಕಾನೂನಿನಲ್ಲಿರತಕ್ಕ ಅಡೆತಡೆಗಳಿಂದ ನಮ್ಮಲ್ಲಿ ಕೆಲವು ಸಮಸ್ಯೆಗಳು ಉದ್ಭವವಾಗುತ್ತವೆ. ನಮ್ಮಲ್ಲಿ ಹಳೆಯ ಜಲಾಶಯವಿರುವುದರಿಂದ ಹಳೆಯ ಪದ್ಧತಿಯಲ್ಲಿ ನಾವು ವ್ಯವಸಾಯ ಮಾಡಿಕೊಂಡು ಬಂದಿರುವುದರಿಂದ ಸ್ವಲ್ಪ ತೊಂದರೆಯಾಗುತ್ತದೆ. ಒಂದು ಸಭೆ ಕರೆಯಿರಿ ನಾವು ಬರುತ್ತೇವೆ. ಅದರಲ್ಲಿ

ಕೂಲಂಕಷವಾಗಿ ಚರ್ಚೆ ಮಾಡಿ ಮಂಗಳವಾರ ಅಥವಾ ಬುಧವಾರ ಈವೊಂದು ತಿದ್ದುಪಡಿಗೆ ಒಪ್ಪಿಗೆ ಸಿಗುತ್ತದೆ. ನಮ್ಮ ರಾಯಚೂರು ಜಿಲ್ಲೆಯಿಂದ ಬರತಕ್ಕ ಎಲ್ಲಾ ಶಾಸಕರ ಅಭಿಪ್ರಾಯ ಕೂಡ ಇದೇ ಇದೆ. ಅವರು ಆಡಳಿತ ಪಕ್ಷದಲ್ಲಿರಬಹುದು ವಿರೋಧಪಕ್ಷದಲ್ಲಿರಬಹುದು. ನಮ್ಮದು ವಿಶೇಷವಾಗಿರತಕ್ಕ ಸಮಸ್ಯೆ. ದಯವಿಟ್ಟು ಚರ್ಚೆಗೆ ಮಾನ್ಯ ನೀರಾವರಿ ಸಚಿವರು ಅವಕಾಶ ಕೊಡಬೇಕು.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿಯೂ ಸಹ ನೀರಾವರಿ ಪ್ರದೇಶವಿದೆ. ಭದ್ರ ಅಚ್ಚುಕಟ್ಟು ಪ್ರದೇಶದಲ್ಲಿ ಈಗಾಗಲೇ 80ರಿಂದ 90ರಷ್ಟು ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿ ರಿಜಿಸ್ಟ್ರೇಷನ್ ಮಾಡಿಸಿದ್ದಾರೆ. ನಾವು ಕಳೆದ ಹತ್ತು ವರ್ಷಗಳಿಂದ ನಮ್ಮಲ್ಲಿ ಸಹಕಾರ ಸಂಘಗಳು ಜಾರಿಗೆ ಬರಬೇಕು ಅಚ್ಚುಕಟ್ಟು ಪ್ರದೇಶದಲ್ಲಿ ಬರತಕ್ಕ ರೈತರು ನೀರಿನ ಉಸ್ತುವಾರಿಯನ್ನು ವಹಿಸಿಕೊಳ್ಳಬೇಕು, ಕಂದಾಯವನ್ನು ಅವರೇ ವಸೂಲಿ ಮಾಡಿಕೊಳ್ಳಬೇಕು, ಕೆನಾಲ್ ಅನ್ನು ಅವರೇ ರಿಪೇರಿ ಮಾಡಿಕೊಳ್ಳಬೇಕು ಹಾಗೆ ಮಾಡುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ಹೇಳಿ ಹೇಳಿ ಸಾಕಾಗಿತ್ತು. ಕಳೆದ ಹತ್ತು ವರ್ಷಗಳಿಂದ ಆಗಿರಲಿಲ್ಲ. ಇತ್ತೀಚೆಗೆ ಮಾನ್ಯ ಪಾಟೀಲ್‌ರವರು ನೀರಾವರಿ ಮಂತ್ರಿಗಳಾದ ಮೇಲೆ ಅಧಿಕಾರಿಗೆ ಹೇಳಿ ಷೇರ್ ಕೂಡ ಕಲೆಕ್ಟ್ ಮಾಡಿ ಅದು ಒಂದು ಅಂತ್ಯಕ್ಕೆ ಬಂದಿದೆ. ಆದ್ದರಿಂದ ನಿಜವಾಗಿಯೂ ಯಾರಿಗೂ ತೊಂದರೆಯಾಗುವುದಿಲ್ಲ. ಕಾರಣ ಏನೆಂದರೆ ಕೆಲವು ಕಡೆಗಳಲ್ಲಿ ಕೆನಾಲ್ ಒಡೆದು ನೀರನ್ನು ಎಲ್ಲೋ ಬಿಟ್ಟುಕೊಂಡಿರುತ್ತಾರೆ. ಸಾವಿರಾರು ಎಕರೆ ಭೂಮಿಯಲ್ಲಿ ಒಂದು ಕಮಾಂಡ್ ಏರಿಯಾ ಎಂದು ಮಾಡಿದ್ದಾರೆ. ಅಲ್ಲಿರತಕ್ಕ ರೈತರು ನೀರು ವೇಸ್ಟ್ ಆಗದಹಾಗೆ ನೋಡಿಕೊಳ್ಳುತ್ತಾರೆ. ಚಾನಲ್ ರಿಪೇರಿಯನ್ನು ಅಧಿಕಾರಿಗಳು ಮಾಡಿದಾಗ ಭ್ರಷ್ಟಾಚಾರ ನಡೆದಿದೆ ಅದನ್ನು ತಪ್ಪಿಸಬೇಕೆಂದು ಹೇಳುತ್ತಾರೆ. ಅಧಿಕಾರ ವಿಕೇಂದ್ರಿಕರಣವಾಗುವುದರಿಂದ ಸುವ್ಯವಸ್ಥಿತವಾಗಿ ನಡೆಯುತ್ತದೆ. ಇದರಲ್ಲಿ ಚರ್ಚೆ ಮಾಡುವುದು ಯಾವುದೂ ಇಲ್ಲ. ಇದರಿಂದ ರೈತರಿಗೆ ಏನೂ ಅನಾನುಕೂಲವಾಗದಿರುವುದರಿಂದ ದಯಮಾಡಿ ಈ ಬಿಲ್ಲನ್ನು ಪಾಸ್ ಮಾಡುವುದು ಒಳ್ಳೆಯದು. ಕಾರಣ ಏನೆಂದರೆ ಈಗಾಗಲೇ ಇದು ಜಾರಿಯಲ್ಲಿ ಬಂದಿದೆ ಪಾಸ್ ಮಾಡುವುದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ನೀವು ಹೆಚ್ಚಿನ ಕಮಾಂಡ್ ಏರಿಯಾ ಹೊಂದಿರುವುದರಿಂದ, ಈ ಮಸೂದೆಯನ್ನು ಪಾಸ್ ಮಾಡಿದರೆ ಚಾನಲ್ ರಿಪೇರಿಗೆ ದುಡ್ಡನ್ನು ಸಹಕಾರಸಂಘಗಳಿಗೆ ಕೊಡತಕ್ಕ ವ್ಯವಸ್ಥೆಯನ್ನು ಮಾಡಲಾಗಿದೆ. ಇದರಿಂದ ತುಂಬಾ ಅನುಕೂಲವಾಗುತ್ತದೆ, ಇದು ತುಂಬಾ ಉಪಯುಕ್ತವಾದ ಬಿಲ್. ಇದನ್ನು ಒಪ್ಪತಕ್ಕದ್ದು ಒಳ್ಳೆಯದೆಂದು ನನ್ನ ಅಭಿಪ್ರಾಯವನ್ನು ತಮ್ಮ ಮೂಲಕ ವ್ಯಕ್ತಪಡಿಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಂಪನಗೌಡರು ಗೊಂದಲವಾಗುತ್ತದೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಒಂದೊಂದು ಡಿಸ್ಟ್ರಿಬ್ಯುಟರೀಸ್‌ಗಳು 80-90ಕಿಲೋಮೀಟರ್ ಇದ್ದಾವೆ. 80-90 ಕಿಲೋಮೀಟರಿಗೆ ಒಂದೇ ಡಿಸ್ಟ್ರಿಬ್ಯುಟರೀಸ್ ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ. ಒಂದೇ ಡಿಸ್ಟ್ರಿಬ್ಯುಟರಿ ಮಾಡುವುದಿಲ್ಲವೆಂದು ತಾವು ಮತ್ತು ಬೋಸರಾಜುರವರು ಇದ್ದಾಗ ಹೇಳಿದ್ದೇನೆ. ನಾವು ಇದಕ್ಕೆ ರಚನೆ ರೂಲ್ಸ್ ಮಾಡುತ್ತೇವೆ. ರೂಲ್ಸ್ ಮಾಡುವಾಗ ನಿಮ್ಮ ಕ್ಷೇತ್ರಕ್ಕೆ ಬೇರೆ ಸಮಸ್ಯೆಗಳಿದಾವೆ, ಭದ್ರ ಪ್ರಾಜೆಕ್ಟ್‌ನಲ್ಲಿ ಬೇರೆ ಸಮಸ್ಯೆಗಳಿದ್ದಾವೆ. ಭದ್ರ ಜಲಾಶಯದಲ್ಲಿ ಹತ್ತು ಸಾವಿರ ಎಕರೆ 3.2 ಟಿಎಂಸಿ ನೀರನ್ನು ಖರ್ಚು ಮಾಡುತ್ತಾರೆ. ನಿಮ್ಮಲ್ಲಿ ಹತ್ತು ಸಾವಿರ ಎಕರೆಗೆ 1.5 ಟಿಎಂಸಿ

ನೀರನ್ನು ಖರ್ಚು ಮಾಡುತ್ತಾರೆ. ಹೀಗೆ ಅನೇಕ ತೊಡಕುಗಳು ಬರುವುದರಿಂದ ಅವುಗಳನ್ನು ನಾವು ನಮ್ಮ ರೂಲ್ಸ್ ಮಾಡತಕ್ಕ ಸಂದರ್ಭದಲ್ಲಿ ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ನಾಲ್ಕು ತಿಂಗಳಿನಿಂದ ಸಾಕಷ್ಟು ಚಿಂತನೆ ಇದರ ಬಗ್ಗೆ ಇದೆ. ಅದರ ಜೊತೆಗೆ ನೀವು ಬೇರೆ ಬೇರೆ ಸಂದರ್ಭದಲ್ಲಿ ಕಾನೂನಿನ ಬಗ್ಗೆ ಸಂಶಯವನ್ನು ವ್ಯಕ್ತ ಮಾಡಿದ್ದೀರಿ. ಅವುಗಳ ಬಗ್ಗೆ ಪರಿಹಾರವನ್ನು ಸಹಿತ ಕಂಡು ಹಿಡಿಯಬಹುದಾಗಿದೆ.

5.20 ಪಿಎಂ

ಹಂಪನಗೌಡರೇ, ನನಗೆ ಒಂದು ಆಶ್ಚರ್ಯ ಆಗುತ್ತದೆ. ನೀವೇ ಇದರಲ್ಲಿ ಬಹಳ ಆಸಕ್ತರಾಗಬೇಕು. ಏಕೆಂದರೆ ಈ ಕಲ್ಪನೆ ಬಂದಕೂಡಲೇ, ಸಹಭಾಗತ್ವವನ್ನು ನಮ್ಮ ರಾಜದೊಳಗೆ ಸರಿಯಾಗಿ ಬಳಕೆ ಮಾಡಿಕೊಂಡವರು ಮೂರು ಜನ. ಒಬ್ಬರು ಬೋೀಸರಾಜು ಅವರು, ಇನ್ನೊಬ್ಬರು ಹಂಪನಗೌಡರು ಮತ್ತು ಮೂರನೇಯವರು ಕರಿಯಣ್ಣನವರು. ಅವರು ಉಬ್ರಾಣಿ-ಹುಬ್ಬಳ್ಳಿ ಯೋಜನೆಯನ್ನು ತೆಗೆದುಕೊಂಡುಬಂದರು, ನೀವು ಮತ್ತು ಬೋೀಸರಾಜು ಅವರು ಸ್ವಚ್ಛತಾ ಕಾರ್ಯಕ್ರಮ ಹೆಸರಿನೊಳಗೆ ಸಾಕಷ್ಟು ಸಂಸ್ಥೆಗಳನ್ನು ಹುಟ್ಟುಹಾಕಿದಿರಿ ಮತ್ತು ಅಲ್ಲಿ ನೀರಾವರಿ ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದೀರಿ. ಆದ್ದರಿಂದ ಇವತ್ತು ಬಹಳಷ್ಟು ನಾವು ಶಾಸಕರು ಒಳ್ಳೆಯ ಮೂಡ್‌ನಲ್ಲಿದ್ದೇವೆ. ಚರ್ಚೆ ಮಾಡೋಣ. ಒಳ್ಳೆಯ ಮಾರ್ಗದರ್ಶನ ಕೊಡಿ. ಅದನ್ನು ಉಪಯೋಗ ಮಾಡಿಕೊಂಡು ನಾವು ವ್ಯವಸಾಯವನ್ನು ಸುಧಾರಣೆ ಮಾಡೋಣ, ಅವಶ್ಯಕವಾದ ಬದಲಾವಣೆ ಮಾಡೋಣ. ಮಾನ್ಯ ಜಗದೀಶ್ ಶೆಟ್ಟರ್ ಅವರು ಈಗ ಚರ್ಚೆಯನ್ನು ಪ್ರಾರಂಭಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ ಶ್ರೀ ಹಂಪನಗೌಡ ಬಾದರ್ಲಿ : ನಾನು ತಮಗೆ ವಿವರವಾಗಿ ಒಂದು ಪತ್ರ ಬರೆದಿದ್ದೇನೆ; ಗಂಗಾವತಿ ತಾಲ್ಲೂಕಿನಲ್ಲಿ ಈ ನೀರು ಬಳಕೆದಾರರ ಸಹಕಾರ ಸಂಘದಿಂದ ಏನು ಸಮಸ್ಯೆ ಉದ್ಭವವಾಗುತ್ತದೆ ಎಂದು. ನಮ್ಮ ತಾಲ್ಲೂಕಿನಲ್ಲಿ ಏನು ಸಮಸ್ಯೆ ಉದ್ಭವವಾಗುತ್ತವೆ, ಮಾನ್ವಿ ತಾಲ್ಲೂಕಿನಲ್ಲಿ ಏನು ಉದ್ಭವವಾಗುತ್ತದೆ ಎಂದು ಪತ್ರದಲ್ಲಿ ತಿಳಿಸಿದ್ದೇನೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ನಮ್ಮದು ಎಡದಂಡೆ ನಾಲೆ 3500 ಕ್ಯೂಸೆಕ್ಸ್ ನೀರಿನ ಪ್ರಮಾಣ ಇರುವಂಥಾದ್ದು. ಗಂಗಾವತಿ ತಾಲ್ಲೂಕಿನಲ್ಲಿ ನೀರಾವರಿ ಪದ್ಧತಿಯೇ ಬೇರೆ. ಅಲ್ಲಿ ರೊಟೇಶನ್ ಸಿಸ್ಟಮ್ ಇಲ್ಲ. ನಮ್ಮ ತಾಲ್ಲೂಕಿನಲ್ಲಿ ಎಲ್ಲ ಡಿಸ್ಟ್ರಿಬ್ಯೂಟರಿಗಳಲ್ಲಿ ರೊಟೇಶನ್ ಸಿಸ್ಟಮ್ ಇದೆ. ಕೊನೆಭಾಗದಲ್ಲಿ ರಾಯಚೂರು ಭಾಗದಲ್ಲಿ, ಕಲ್ಮಲಾಕ್ಕೆ ಹೋದರೆ ಕಳೆದ 35 ವರ್ಷಗಳಿಂದ ತಮ್ಮದೇ ಆದ ರೀತಿಯಲ್ಲಿ ವ್ಯವಸಾಯ ಪದ್ಧತಿಯನ್ನು ರೈತರು ಅನುಸರಿಸಿಕೊಂಡುಬಂದಿದ್ದಾರೆ. ಇವತ್ತು ತಾವು ನಿಜವಾಗಿಯೂ ಹೊಸ ಅಣೆಕಟ್ಟುಗಳಲ್ಲಿ ಮತ್ತು ಪ್ರಾರಂಭದ ಹಂತದಲ್ಲಿರತಕ್ಕದ್ದರಲ್ಲಿ ಪರಿಣಾಮಕಾರಿಯಾದಂಥ ಚಿಂತನೆ ಮಾಡಿ ಈ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಇದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಪರಿಸ್ಥಿತಿ ಏನಾಗಿದೆ ಎಂದರೆ ಇವತ್ತು ಹಳೆಯ ಜಲಾಶಯ, ನಮ್ಮ ತುಂಗಭದ್ರಾ ಎಡದಂಡೆ ಏನಿದೆ, ಅಲ್ಲಿ ದೊಡ್ಡ ಪ್ರಮಾಣದಲ್ಲಿ ವ್ಯವಸಾಯ ಇವತ್ತು ಇದೆ. ಸುಮಾರು 6-6 $^{1}/_{2}$ ಲಕ್ಷ ಎಕರೆ ಒಂದೇ ಕೆನಲ್ ವ್ಯಾಪ್ತಿಯಲ್ಲಿ ಬರತಕ್ಕದ್ದು ಇರುವುದರಿಂದ ಸಮಸ್ಯೆಗಳು ಇವೆ. ದಯವಿಟ್ಟು ಒಂದು ಸಭೆಯನ್ನು ಕರೆಯಿರಿ. ಮಂಗಳವಾರ ಅಥವಾ ಬುಧವಾರ ಇದರ ಬಗ್ಗೆ ಚಿಂತನೆ ಮಾಡಿ ನಮ್ಮ ಸಲಹೆಗಳನ್ನು ಕೊಡುತ್ತೇವೆ.

ಶ್ರೀ ಹೆಚ್.ಕೆ. ಪಾಟೀಲ್ : ರೂಲ್ಸ್ ಮಾಡುವುದಕ್ಕೆ ಮುಂಚೆ ನಿಮಗೆ ಸಮಾಧಾನವಾಗುವ ಮಟ್ಟಿಗೆ ಸಭೆಯನ್ನು ಕರೆಯುತ್ತೇನೆ ಮತ್ತು ರೂಲ್ಸ್‌ನ್ನು ನಾನು ಮಾಡಿಕೊಡುತ್ತೇನೆ.

ಅಧ್ಯಕ್ಷರು: ಮಾನ್ಯ ಶೆಟ್ಟರ್ ಅವರು ಪ್ರಾರಂಭ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಕೆಲವು ಸದಸ್ಯರು ಚರ್ಚೆ ಮಾಡಬೇಕೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಭೈರೇಗೌಡರು ಒಪ್ಪಿಕೊಂಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಒಂದು ದಿವಸದಿಂದ ಏನೂ ವ್ಯತ್ಯಾಸ ಆಗುವುದಿಲ್ಲ.

(ಗೊಂದಲ)

ಶ್ರೀ ಹಂಪನಗೌಡ ಬಾದರ್ಲಿ : ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಒಂದು ದಿವಸದಿಂದ ಏನೂ ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಆರ್ಡಿನೆನ್ಸ್ ಇದೆ, ಕೆಲಸ ನಡೆದಿದೆ. ಇಂತಹ ಸಂದರ್ಭ ಹಿಂದೆ ಬಂದಿದೆ.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ನೀರಾವರಿ ಸಚಿವರಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಏಕೆಂದರೆ ಇದು ಸಮಸ್ಯೆ ಇರತಕ್ಕಂಥಾದ್ದು. ನಾವು ಮಾತನಾಡಿದ್ದಕ್ಕೆ ಇದು ವಿರೋಧವೆಂದು ದಯವಿಟ್ಟು ತಿಳಿದುಕೊಳ್ಳುವುದಕ್ಕೆ ಹೋಗಬೇಡಿ. ಇದು ಒಂದು ಕ್ರಾಂತಿಕಾರವಾದಂಥ ತಿದ್ದುಪಡಿ. ದಯವಿಟ್ಟು ಮೂರು ದಿವಸ ತಡೆದರೆ ಏನೂ ಆಗುವುದಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ರೈತರ ವಿಚಾರ ಚರ್ಚೆ ಮಾಡುವುದಕ್ಕೆ ವಿಧಾನಸಭೆಯಲ್ಲಿ ಇದಕ್ಕಿಂತ ಹೆಚ್ಚು ಶಾಂತ ಹಾಗೂ ಅನುಕೂಲಕರ ವಾತಾವರಣ ಬರುತ್ತದೆ ಎಂದು ಇದ್ದರೆ ಸೋಮವಾರವಾಗಲಿ, ಮಂಗಳವಾರವಾಗಲಿ, ಬುಧವಾರವಾಗಲಿ ನನ್ನ ತಕರಾರು ಇಲ್ಲ. ಇವತ್ತು ಸಮಗ್ರವಾಗಿ ಗಂಭೀರವಾಗಿ ಚಿಂತನೆ ಮಾಡತಕ್ಕಂಥ ವಾತಾವರಣ ಇದೆ. ಚರ್ಚೆ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನನ್ನ ವೈಯಕ್ತಿಕ ಅಭಿಪ್ರಾಯ. ನೀವೇನು ಹತ್ತು ಬಿಟ್ಟು ಇಪ್ಪತ್ತು ಸಲಹೆಗಳನ್ನು ಮಾಡುವುದಿದ್ದರೆ ಮಾಡಿ. ನಾನು ಕ್ಲಾರಿಫಿಕೇಶನ್ ಕೊಡುವುದಕ್ಕೆ ಸಾಧ್ಯವಾಗಿಲ್ಲವೆಂದರೆ, ಸೋಮವಾರ ಕೊಡುತ್ತೇನೆ ಎಂದರೆ ಸೋಮವಾರಕ್ಕೆ ಮುಂದೆ ಹಾಕಿರಿ. If you need any clarification, I am here to give you. If you are not satisfied, you postpone it. This Bill was introduced 5 days back.

ಶ್ರೀ ಹಂಪನಗೌಡ ಬಾದರ್ಲಿ : ಇವತ್ತು ನಮಗೆ ಬಿಲ್ ಕಾಪಿ ಸಿಕ್ಕಿದೆ.

ಶ್ರೀ ಹೆಚ್.ಕೆ. ಪಾಟೀಲ್ : ಐದು ದಿವಸಗಳ ಮುಂಚೆ ನಾನು ಇಂಟ್ರೋಡ್ಯೂಸ್ ಮಾಡಿದ್ದೇವೆ.

ಶ್ರೀ ಹಂಪನಗೌಡ ಬಾದರ್ಲಿ : ಇದು ಈಗ ಬಂದಿದೆ, ನಾವು ತರಿಸಿಕೊಂಡಿದ್ದೇವೆ. ನಮ್ಮ ರೂಮಿಗೆ ಬಂದಿರಲಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ನಿಮಗೆಲ್ಲರಿಗೂ ಚರ್ಚೆಗೆ ಅನುಕೂಲ ಆಗಬೇಕು ಎಂದು ಐದು ದಿವಸ ಹಿಂದೆ ನಾನು ಇಂಟ್ರೊಡ್ಯೂಸ್ ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಎರಡು ಗಂಟೆಗೆ ಸಭೆ ಮುಗಿಯುತ್ತದೆ ಎಂದು ಕಲ್ಪನೆ ಇತ್ತು. ಕೆಲವರು ಊರಿಗೆ ಹೋಗಿದ್ದಾರೆ. ಇನ್ನೂ ಕೆಲವರು ಚರ್ಚೆಯಲ್ಲಿ ಭಾಗವಹಿಸಬಹುದು. ಒಳ್ಳೆಯ ವಾತಾವರಣ ಏನಿದೆ ಅದರ ಬಗ್ಗೆ ಬೇರೆ ಪ್ರಶ್ನೆ ಇಲ್ಲ. ಈ ಬಿಲ್ ಪಾಸ್ ಮಾಡಿಕೊಡುವುದಕ್ಕೆ ನಮ್ಮದು ವಿರೋಧ ಇಲ್ಲ. ಇಲ್ಲಿ ಚರ್ಚೆಯಲ್ಲಿ ಕೆಲವು ಜನರು ಭಾಗವಹಿಸಬೇಕು ಎಂದು ಇದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್ : ಕೆಲವು ಸಲ ಎಲ್ಲರಲ್ಲೂ ಒಂದೇ ಅಭಿಪ್ರಾಯ ಇದ್ದರೂ ಸಹಿತ ಚರ್ಚೆಗೆ ಒಳ್ಳೆಯ ವಾತಾವರಣ ಇರುವುದಿಲ್ಲ. ಆದರೆ ಇವತ್ತು ರೈತರ ಬಗ್ಗೆ ಕಳಕಳಿಯಿಂದ ಚರ್ಚೆ ಮಾಡುವುದಕ್ಕೆ ತಾವು ಕೂಡ ಫ್ರೆಶ್ ಆಗಿ ಬಂದಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : ಉಳಿದವರ ಇನ್ವಾಲ್‌ಮೆಂಟ್ ಕೂಡ ಇರಲಿ ಎಂದು ಅಷ್ಟೆ. ಇನ್ನೂ ಎಷ್ಟೋ ಜನರು ಊರಿಗೆ ಹೋಗಬೇಕು. ಆದ್ದರಿಂದ ಎಲ್ಲರೂ ಬಯಸುತ್ತಿದ್ದಾರೆ ಇದನ್ನು ಸೋಮವಾರ, ಮಂಗಳವಾರ ಇಟ್ಟುಕೊಳ್ಳೋಣ ಎಂದು.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ನೀರಾವರಿ ಸಚಿವರಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ. ಇನ್ನು ಮೂರು ದಿವಸ ಆದಮೇಲೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ಎನ್.ಎಸ್. ಬೋಸರಾಜು : ಹಂಪನಗೌಡರೇ, ನೀವು ಇಷ್ಟೊಂದು ಕಳಕಳಿ ವ್ಯಕ್ತಪಡಿಸುವ ಅವಶ್ಯಕತೆ ಇಲ್ಲ. ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ. ನೀವು, ನಾವು ಅನೇಕ ಬಾರಿ ಚರ್ಚೆ ಮಾಡಿದ್ದೇವೆ, ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳಿದ್ದೇವೆ. ರೂಲ್ಸ್ ಮಾಡುವಂಥ ಸಂದರ್ಭದಲ್ಲಿ ನಮಗೆ ಇರುವಂಥ ತೊಂದರೆಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಈಗ ಮಂಡಿಸಿರುವಂಥ ಬಿಲ್‌ನ್ನು ಪಾಸ್ ಮಾಡಿ ಮುಂದೆ ನಮ್ಮ ಪ್ರಾಜೆಕ್ಟ್ ಏರಿಯಾದಲ್ಲಿ ಮತ್ತು ಎಡದಂಡೆ ಕಾಲುವೆಯಲ್ಲಿ ಬರತಕ್ಕಂಥ ರೈತರಿಗೆ ಇರತಕ್ಕಂಥ ತೊಂದರೆಗಳನ್ನು ಸರಿಪಡಿಸುವುದಕ್ಕೆ ಅವಕಾಶ ಇದೆಯೆಂದು ಈ ಸಂದರ್ಭದಲ್ಲಿ ಹೇಳಿ ತಾವೆಲ್ಲರೂ ರೈತರ ಪರನಾಗಿ ಇರತಕ್ಕಂಥವರು, ಈ ಬಿಲ್‌ನ್ನು ಪಾಸ್ ಮಾಡಬೇಕೆಂದು ನಾನು ಎಲ್ಲರಿಗೂ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಒಂದು ಕೆಲಸ ಮಾಡೋಣ. ಇವತ್ತು ಶೆಟ್ಟರ್‌ರವರೇ, ತಾವು ರೆಡಿ ಇಲ್ಲದಿದ್ದರೆ ಬೇರೆಯವರು ಪ್ರಾರಂಭ ಮಾಡಲಿ. ನಾವು ಸೋಮವಾರ ಕೂಡ ಇದನ್ನು ತೆಗೆದುಕೊಳ್ಳೋಣ. ಎರಡು ದಿವಸ ತೆಗೆದುಕೊಳ್ಳೋಣ.

SRI H.K. PATIL : If need be, after discussion, even if you continue for 2 or 3 days, I have no objection.

ಅಧ್ಯಕ್ಷರು : ಈಗ ಬೇರೆ ಯಾರು ಪ್ರಾರಂಭ ಮಾಡುತ್ತಾರೋ ಮಾಡಲಿ. ಸೋಮವಾರ ಕೂಡ ಬೇಕಾದರೆ ತೆಗೆದುಕೊಳ್ಳೋಣ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ಈಗ ನಮ್ಮ ನೀರಾವರಿ ಮಂತ್ರಿಗಳು ಯಾವುದೇ ವಿಚಾರಕ್ಕೆ ಬೇಕಾದರೂ ಸ್ಪಂದಿಸುವುದಕ್ಕೆ ತಯಾರಿದ್ದಾರೆ. ರೈತರಿಗೆ ಅನ್ಯಾಯ ಆಗತಕ್ಕದ್ದು, ಅನಾನುಕೂಲವಾಗತಕ್ಕದ್ದು ಇದ್ದರೆ ಪಕ್ಷಭೇದ ಮರೆತು ಈ ಕಾನೂನಿನ ನಿಯಮಾವಳಿಗಳನ್ನು ಪರಿವರ್ತನೆ ಮಾಡುವುದರಲ್ಲಿ ಅವರು ಮುಕ್ತ ಮನಸ್ಸನ್ನು ಹೊಂದಿದ್ದಾರೆ. ಒಂದು ಪಕ್ಷ ಏನಾದರೂ ಇದರಿಂದ ಅನಾನುಕೂಲ ವಾಗುತ್ತದೆ ಎಂದರೆ ಯಾವಾಗ ಬೇಕಾದರೂ ಬದಲಾವಣೆ ಮಾಡುವುದಕ್ಕೆ ಕೂಡ ಅವರು ಸಿದ್ಧರಿರುವುದರಿಂದ, ಮುಕ್ತ ಮನಸ್ಸಿನಿಂದ ಅವರು ಇರುವುದರಿಂದ ಈ ಬಿಲ್‌ನ್ನು ಎಲ್ಲರೂ ಒಪ್ಪಬೇಕಾಗುತ್ತದೆ. ಈಗ ನಮ್ಮ ಸ್ನೇಹಿತರು ಏನು ಮಾತನಾಡುತ್ತಾರೆ. ಅವರು ತುಂಬ ಆತ್ಮೀಯರು. ಯಾವಾಗ ಬೇಕಾದರೂ ರೂಲ್ಸ್‌ನ್ನು ಬದಲಾವಣೆ ಮಾಡಿಕೊಡುತ್ತೇನೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಏಕೆಂದರೆ ನಾವು ಒಂದು ವರ್ಷದಿಂದ ಈ ಸೊಸೈಟಿ ಮಾಡುತ್ತೇವೆ ಎಂದು ಹೇಳಿ ಹೇಳಿ ಸಾಕಾಗಿದೆ. ಇನ್ನು ನಾವು ಸುಳ್ಳು ಹೇಳುತ್ತಿದ್ದೇವೆ ಏನೋ ಎನ್ನುವಂಥಾದ್ದು ಆಗಬಾರದು. ಆದ್ದರಿಂದ ಸಚಿವರು ಬಿಲ್‌ನ್ನು ಏನು ಮಂಡನೆ ಮಾಡಿಬಿಟ್ಟಿದ್ದಾರೆ, ಅದನ್ನು ಪಾಸ್ ಮಾಡಿಕೊಡುವುದು ಒಳ್ಳೆಯದು.

ಅಧ್ಯಕ್ಷರು : ಮಾನ್ಯ ಸದಸ್ಯರು ಯಾವ ಪಕ್ಷದಿಂದಲಾದರೂ ಪ್ರಾರಂಭ ಮಾಡಲಿ.

ಶ್ರೀ ಕರಿಯಣ್ಣ : ಯಾವಾಗ ಬೇಕಾದರೂ ಯಾವುದೇ ಚರ್ಚೆ ಇಲ್ಲದೆ ಇದನ್ನು ಬದಲಾವಣೆ ಮಾಡಿಕೊಡುವುದಕ್ಕೆ ಅವರು ತಯಾರಿದ್ದಾರೆ. ಏಕೆಂದರೆ ನಾವು ಸೊಸೈಟಿಯನ್ನು ರಿಜಿಸ್ಟ್ರೇಶನ್ ಮಾಡಿಬಿಟ್ಟಿದ್ದೇವೆ. ಇದು ಆಗುತ್ತದೆ ಎಂದು ಜನರಿಗೆ ಹೇಳಿಬಿಟ್ಟಿದ್ದೇವೆ. ಆದ್ದರಿಂದ ಅಸೆಂಬ್ಲಿಯಲ್ಲಿ ಅಜೆಂಡಾದಲ್ಲಿ ಬಂದ ಬಿಲ್ ಹೋಯಿತು ಎನ್ನತಕ್ಕಂಥ ಪರಿಸ್ಥಿತಿ ಬರುವುದು ಬೇಡ. ಆದ್ದರಿಂದ ದಯವಿಟ್ಟು ಬಿಲ್‌ನ್ನು ಪಾಸ್ ಮಾಡಿಕೊಡುವುದು ಉತ್ತಮ ಎಂದು ನನಗನ್ನಿಸುತ್ತದೆ.

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಈಗ ನಾನು ಕೆಲವು ಕ್ಲಾರಿಫಿಕೇಶನ್ಸ್‌ನ್ನು ಮಾನ್ಯ ನೀರಾವರಿ ಸಚಿವರಿಗೆ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ತಾವೇನು ನೀರಾವರಿ ಇಲಾಖೆಯಲ್ಲಿ ನೀರು ಬಳಕೆದಾರರ ಸಂಘಕ್ಕೆ ತಿದ್ದುಪಡಿ ತಂದು ಹೊಸ ಕಾನೂನನ್ನು ರಚನೆ ಮಾಡಿದ್ದೀರಿ, ಒಂದೊಂದು ನೀರಾವರಿ ಭಾಗದಲ್ಲಿ ಇರತಕ್ಕಂಥ ಅಣೆಕಟ್ಟಿನಲ್ಲಿ ಒಂದೊಂದು ಸಮಸ್ಯೆ ಇರುತ್ತದೆ. ಇವತ್ತು ಗುಲ್ಬರ್ಗಾ, ಶಹಪುರ ತಾಲ್ಲೂಕಿನ ಶಾಸಕರು ಕೂಡ ಹೇಳಿದ್ದಾರೆ. ಅಲ್ಲಿ ಕೃಷ್ಣಾ ಜಲಾಶಯ ವ್ಯಾಪ್ತಿಯಲ್ಲಿರತಕ್ಕಂಥ ಸಮಸ್ಯೆ ಬೇರೆ, ನಮ್ಮಲ್ಲಿ ಬರತಕ್ಕಂಥ ಸಮಸ್ಯೆಗಳು ಬೇರೆ. ಕಳೆದ ಮೂವತ್ತು-ಮೂವತ್ತೈದು ವರ್ಷಗಳಿಂದ ನಮ್ಮ ತುಂಗಭದ್ರಾ ಎಡದಂಡೆ ನಾಲೆಯ ವ್ಯಾಪ್ತಿಯಲ್ಲಿ ವ್ಯವಸಾಯವನ್ನು ರೈತರು ಮಾಡಿಕೊಂಡು ಬಂದಿದ್ದಾರೆ. ಇವತ್ತು 10-15 ವರ್ಷಗಳ ಹಿಂದೆ ಇರತಕ್ಕಂಥ ನೀರಾವರಿ ಪದ್ಧತಿಗೂ, ಇವತ್ತಿನ ನೀರಾವರಿ ಪದ್ಧತಿಗೂ ಬಹಳಷ್ಟು ವ್ಯತ್ಯಾಸ ಇದೆ. ಪ್ರತಿ ಐದು ವರ್ಷ, ಎರಡು-ಮೂರು ವರ್ಷಕ್ಕೊಮ್ಮೆ ಎಡದಂಡೆ ನಾಲೆಯನ್ನು ಭದ್ರಪಡಿಸಿ ನೀರಾವರಿ ವ್ಯವಸ್ಥೆಯನ್ನು ಹೆಚ್ಚಿಗೆ ಮಾಡಬೇಕೆಂದು ಹೊರಟಿದ್ದೇವೆ. ಇಂತಹ ಸಂದರ್ಭದಲ್ಲಿ ಈ ನೀರು ಬಳಕೆದಾರರ ಸಂಘ ಏನು ತಂದಿದ್ದೀರಿ, ಇದರಲ್ಲಿ ನಿಜವಾಗಿ ನಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಮತ್ತು ನಮ್ಮ ಜಲಾಶಯ ವ್ಯಾಪ್ತಿಯಲ್ಲಿ ಕೆಲವು ಸಮಸ್ಯೆಗಳು ಬರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ. ಈ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದಕ್ಕೆ

ರೂಲ್ಸ್‌ನಲ್ಲಿ ಅನುಕೂಲ ಮಾಡಿಕೊಡುತ್ತೇನೆ ಎಂದು ಮಾನ್ಯ ಸಚಿವರು ಸದನಕ್ಕೆ ಭರವಸೆ ಕೊಟ್ಟಿದ್ದಾರೆ. ಸಂತೋಷ ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಜೊತೆಯಲ್ಲಿ ಇಲ್ಲಿ ಏನಾಗಿದೆ ಎಂದರೆ, ಪ್ರಮುಖವಾಗಿ ಎಡದಂಡೆ ನಾಲೆ ವ್ಯಾಪ್ತಿಯಲ್ಲಿ ಸುಮಾರು 6 ಲಕ್ಷ 60 ಸಾವಿರ ಎಕರೆಯಷ್ಟು ನೀರಾವರಿ ನಮ್ಮ ಭಾಗದಲ್ಲಿ ಆಗುತ್ತಿದೆ. ಇದರಲ್ಲಿ ಗಂಗಾವತಿ ತಾಲ್ಲೂಕು ಸುಮಾರು 89 ಸಾವಿರ ಎಕರೆ ನೀರಾವರಿ ಪ್ರದೇಶಕ್ಕೆ ಒಳಪಡುತ್ತೆ. ನನ್ನ ತಾಲ್ಲೂಕು ಒಂದು ಲಕ್ಷ 19 ಸಾವಿರ ಎಕರೆ ನೀರಾವರಿ ವ್ಯಾಪ್ತಿಗೆ ಬರುತ್ತೆ. ಮಾನ್ವಿ ತಾಲ್ಲೂಕು ಕೂಡ ಒಂದು ಲಕ್ಷ 20 ಸಾವಿರ ಎಕರೆ ನೀರಾವರಿ ವ್ಯಾಪ್ತಿಗೆ ಬರುತ್ತೆ. ಇನ್ನು ಉಳಿದಿದ್ದು ರಾಯಚೂರು ಮತ್ತು ಕಲ್ಮಲ ಈ ಕ್ಷೇತ್ರಗಳಲ್ಲಿ ಸುಮಾರು 79-80 ಸಾವಿರ ಎಕರೆ ನೀರಾವರಿ ವ್ಯಾಪ್ತಿಯಲ್ಲಿ ಬರುತ್ತೆ. ಮೊದಲು ಮುಖ್ಯ ಕಾಲುವೆಯಿಂದ ಹಿಡಿದು ಡಿಸ್ಟ್ರಿಬ್ಯೂಟರಿ, ಸಬ್ ಡಿಸ್ಟ್ರಿಬ್ಯೂಟರಿ ಮತ್ತು ಫೀಲ್ಡ್ ಚಾನಲ್ ಇವುಗಳಲ್ಲಿ ನನಗೆ ಸಮಸ್ಯೆ ಬಂದಿರತಕ್ಕಂಥಾದ್ದು, ಏನೆಂದರೆ, ಒಂದೊಂದು ಡಿಸ್ಟ್ರಿಬ್ಯೂಟರಿಯಲ್ಲಿ ಉದಾಹರಣೆಗೆ 54ನೇ ಡಿಸ್ಟ್ರಿಬ್ಯೂಟರಿಯಿಂದ ಸುಮಾರು 89 ಸಾವಿರ ಎಕರೆ ನನ್ನ ತಾಲ್ಲೂಕಿನಲ್ಲಿ ನೀರಾವರಿಯಾಗುತ್ತದೆ. ನೀವು ಈ ತಿದ್ದುಪಡಿಯಲ್ಲಿ ಏನು ತಂದಿದ್ದೀರಿ, ನೀರು ಬಳಕೆದಾರರ ಸಹಕಾರಿ ಸಂಘ ಹನ್ನೆರಡುನೂರು ಎಕರೆಗೆ ಒಂದು ಸಂಘ, ಅದಕ್ಕೆ ಒಬ್ಬ ಅಧ್ಯಕ್ಷ, ಮತ್ತು ಸದಸ್ಯರು ಆ ಭಾಗದ ರೈತರು. ಇವತ್ತು ನೀವು 89 ಸಾವಿರ ಎಕರೆ ನೀರಾವರಿ ಪ್ರದೇಶಕ್ಕೆ ನೀರು ಕೊಡಬೇಕಾದರೆ, ಅಷೂರ್ಡ್ ವಾಟರ್ ಬೇಕು. ಮೊದಲು ಸಹಕಾರಿ ಸಂಘಕ್ಕೆ ನೀರಾವರಿ ಮಾಡಬೇಕಾದರೆ, ಅಷೂರ್ಡ್ ವಾಟರನ್ನು ನಾವು ಮೊದಲು ಕೊಡಬೇಕಾಗುತ್ತದೆ. ಮಧ್ಯಭಾಗದ ಮತ್ತು ಕೊನೇ ಭಾಗದ ರೈತರಿಗೆ ಈ ಒಂದು ವ್ಯವಸ್ಥೆಯಲ್ಲಿ ಅಷೂರ್ಡ್ ವಾಟರನ್ನು ಕೊಡುವುದಕ್ಕಾಗುತ್ತದೆಯೇ? ನೀವು ಸಹಕಾರಿ ಸಂಘ ಮಾಡಿದ ಮೇಲೆ, ಅಧಿಕಾರಿಗಳ ಕಾರ್ಯ ವ್ಯಾಪ್ತಿ ಬಹಳಷ್ಟು ಕಡಿಮೆ ಇದೆ. ಸಂಪೂರ್ಣವಾಗಿ ರೈತರಿಗೆ ಇದರಲ್ಲಿ ಅಧಿಕಾರವನ್ನು ಕೊಟ್ಟಿರುವುದರಿಂದ ಒಬ್ಬ ಮನುಷ್ಯ ಕೆಲಸ ಮಾಡುವುದಕ್ಕೂ ಮತ್ತು ಹತ್ತಾರು ಜನ ಅಧ್ಯಕ್ಷರು ಮತ್ತು ಸಾವಿರಾರು ಜನ ರೈತರು ಸೇರಿ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೂ ಬಹಳಷ್ಟು ವ್ಯತ್ಯಾಸವಾಗುತ್ತದೆ. ಒಬ್ಬ ಅಧಿಕಾರಿಯಿಂದಲೇ ನಾವು ನೀರು ಹರಿಸಬೇಕೆಂದರೆ ಬಹಳಷ್ಟು ಸಮಸ್ಯೆಗಳು ಇದೆ. ಇನ್ನು ರೊಟೇಷನ್ ಸಿಸ್ಟಂ, ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ 36ನೇ ಡಿಸ್ಟ್ರಿಬ್ಯೂಟರಿ ಇದೆ. ಇಲ್ಲಿ 4 ರೊಟೇಷನ್ ಇದೆ. ಮೊದಲನೇ ರೊಟೇಷನ್‌ನಲ್ಲಿ 7 ದಿವಸದವರೆಗೆ ಮೇಲ್ಭಾಗದಲ್ಲಿ ಕಾಲುವೆಗೆ ನೀರು ಕೊಡುತ್ತೇವೆ. ಅದೇ 7 ಭಾಗ 3ನೇ ರೊಟೇಷನ್‌ಗೆ ಬರುತ್ತದೆ. ಎರಡನೆಯದು ಮತ್ತು ನಾಲ್ಕನೆಯದು 15 ದಿವಸಕ್ಕೆ ನೀರು ಮುಟ್ಟುತ್ತವೆ. ಈ ಸಂದರ್ಭದಲ್ಲಿ ನೀವು ಅಷ್ಯೂರ್ಡ್ ವಾಟರ್ ಕೊಡಬೇಕಾದರೆ, ಮೇಲ್ಭಾಗದಲ್ಲಿ ನೀರು ಬಂದ್ ಮಾಡಿದಾಗ ಎರಡನೇ ಡಿಸ್ಟ್ರಿಬ್ಯೂಟರಿಯಲ್ಲಿ ಬಳಕೆದಾರರ ಸಂಘದವರು ನೀರು ಕೊಡಿ ಎಂದರೆ, ಅಲ್ಲಿ ನೀರು ಕೊಡುವುದಕ್ಕೆ ಅವಕಾಶವಿರುವುದಿಲ್ಲ. ಏಕೆಂದರೆ, ತಮಗೆ ನಾನು ಮೊದಲೇ ಹೇಳಿದ್ದೇನೆ. ಅಲ್ಪ ನೀರಿನಲ್ಲಿ ಹೆಚ್ಚಿನ ನೀರಾವರಿ ವ್ಯವಸ್ಥೆ ಮಾಡತಕ್ಕ ಪದ್ಧತಿಯನ್ನು ರೈತರು ಅಳವಡಿಸಿಕೊಂಡಿದ್ದಾರೆ. 5-10 ನಿಮಿಷಕ್ಕೆ 5 ಎಕರೆ, 10 ಎಕರೆ ನೀರಾವರಿ ಮಾಡುತ್ತೇವೆ. ಬೆಳಿಗ್ಗೆ 7 ಗಂಟೆಗೆ ಪ್ರಾರಂಭವಾದರೆ 7-15ಕ್ಕೆ 10 ಎಕರೆಗೆ ನೀರು ಹಾಯಿಸಬೇಕೆಂದರೆ ರೈತರು ನೀರು ತೋಯಿಸುತ್ತಾರೆ. ಈ ಒಂದು ಪದ್ಧತಿಯನ್ನು ಅಳವಡಿಸಿಕೊಂಡಿರುವುದರಿಂದ ಇಲ್ಲೇನಾಗುತ್ತೆ ಬಹಳಷ್ಟು

ಗೊಂದಲಮಯವಾದಂಥ ವಾತಾವರಣ ರೈತರಲ್ಲಿ ಉದ್ಭವವಾಗುವಂಥ ಸಾಧ್ಯತೆಗಳು ಇವೆ. ಇದರ ಬಗ್ಗೆ ನನ್ನೊಂದು ಸಲಹೆ. ಇದನ್ನು ನಾನು ಮೊದಲೇ ತಮಗೆ ಪತ್ರದಲ್ಲಿ ಕೂಡ ಬರೆದಿದ್ದೆ. ಈ ಒಂದು ನೀರು ಬಳಕೆದಾರರ ಸಹಕಾರಿ ಸಂಘಗಳು ಏನಿವೆ, ಹಳೇ ಜಲಾಶಯದಲ್ಲಿ ತುಂಗಭದ್ರಾ ಜಲಾಶಯದ ಎಡದಂಡೆ ನಾಲೆಯಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಡಿಸ್ಟ್ರಿಬ್ಯೂಟರಿಯನ್ನು ಟ್ರಯಲ್ ಬೇಸಿಸ್‌ನಲ್ಲಿ ತೆಗೆದುಕೊಂಡು ನೋಡಿ. 6 ತಿಂಗಳು ಅಥವಾ ಆ ಒಂದು ಸೀಸನ್ ನೋಡಿ, ಡಿಸ್ಟ್ರಿಬ್ಯೂಟರಿಗೆ ಈ ಸಹಕಾರಿ ಸಂಘಗಳನ್ನು ರಚನೆ ಮಾಡಿ ಆ ಒಂದು ಸಹಕಾರಿ ಸಂಘಗಳು ಯಶಸ್ವಿಯಾಗಿ ಸರಿಯಾಗಿ ನೀರು ಒದಗಿಸಿದವು ಎಂದರೆ ಪುನಃ ಎರಡನೇ ಸೀಸನ್‌ಗೆ, 2ನೇ ಉಪ ಕಾಲುವೆಗೆ ಈ ಸಂಘಗಳನ್ನು ರಚನೆ ಮಾಡಿದರೆ ಇನ್ನೂ ಉತ್ತಮವಾದಂಥ ಕಾರ್ಯಗಳು ಆಗಬಹುದು. ಇದು ನಮ್ಮದು, ನಿಮ್ಮದೂ ಚಿಂತನೆ ಇದೆ. ಈಗ 1 ಲಕ್ಷ 19 ಸಾವಿರ ಎಕರೆ ನೀರಾವರಿ ಆಗಬೇಕೆಂದರೆ, ನನ್ನ ಕ್ಷೇತ್ರದಲ್ಲಿ 2,700 ಕ್ಯೂಸೆಕ್ಸ್ ನೀರು ಬಳಸಬೇಕು. ಆಮೇಲೆ ನಮ್ಮ ಕಾಲುವೆಗಳ ಪರಿಸ್ಥಿತಿ ಏನಾಗಿದೆ ಎಂದರೆ, ಒಂದೊಂದು ಕಾಲುವೆಗಳು ಹಳ್ಳಗಳಾಗಿವೆ. ಇವುಗಳ ದುರಸ್ತಿ ಇಲ್ಲ. ನಾವು ಬಳಕೆದಾರರ ಸಂಘಗಳನ್ನು ರಚನೆ ಮಾಡಿದಮೇಲೆ ಅಷೂರ್ಡ್, ವಾಟರ್ ಕೊಡಬೇಕೆಂದರೆ, ಆ ಸೌಲಭ್ಯಗಳನ್ನು ಒದಗಿಸಿದಾಗ ಮಾತ್ರ ಒಂದು ಸಂಘದಿಂದ ಇನ್ನೊಂದು ಸಂಘಕ್ಕೆ ನೀರು ಕೊಡುವುದಕ್ಕೆ ಸಾಧ್ಯತೆ ಇದೆ. ನೀವು ಇಟ್ಟಿರುವುದು ಒಂದು ಡಿಸ್ಟ್ರಿಬ್ಯೂಟರಿಯಲ್ಲಿ 89 ಸಾವಿರ ಎಕರೆಗೆ ನೀರಾವರಿ ಮಾಡುವುದರಲ್ಲಿ ಸುಮಾರು 89 ಸಾವಿರ ಸಹಕಾರಿ ಸಂಘಗಳನ್ನು ರಚನೆ ಮಾಡಬೇಕಾಗುತ್ತದೆ. ಈ 89 ಸಹಕಾರಿ ಸಂಘಗಳಿಗೆ ನೀರು ಒದಗಿಸಬೇಕೆಂದರೆ, ಆ ಕಾಲುವೆಗಳು, ಉಪ ಕಾಲುವೆಗಳು ಮತ್ತು ಸೀಳುಕಾಲುವೆಗಳು ವ್ಯವಸ್ಥಿತ ರೀತಿಯಲ್ಲಿ ಮಾಡಿಕೊಟ್ಟಾಗ ಮಾತ್ರ ಈ ನೀರಾವರಿ ಸರಿಯಾದ ರೀತಿಯಲ್ಲಿ ಆಗುವುದಕ್ಕೆ ಸಾಧ್ಯತೆ ಇದೆ. ಇಂತಹ ಅನೇಕ ಸಮಸ್ಯೆಗಳು ನಮ್ಮ ಮುಂದೆ ಇರುವುದರಿಂದ ಗೊಂದಲಮಯವಾದ ವಾತಾವರಣ ತುಂಗಭದ್ರಾ ಎಡದಂಡೆ ನಾಲೆಯಲ್ಲಿ ಸೃಷ್ಟಿಯಾಗಬಹುದು. ಇನ್ನೂ ಇಂತಹ ಅನೇಕ ಸಮಸ್ಯೆಗಳು ಇವೆ. ಈಗ 3-4 ಉದಾಹರಣೆಗಳನ್ನು ಮಾತ್ರ ನಿಮ್ಮ ಮುಂದೆ ಇಟ್ಟಿದ್ದೇನೆ. ಇವುಗಳ ಬಗ್ಗೆ ದಯವಿಟ್ಟು ತಾವು ಚಿಂತನೆ ಮಾಡಬೇಕಾದರೆ, ಅಧಿಕಾರಿಗಳನ್ನು ಕರೆಸಿರಿ. ಏಕೆಂದರೆ, ಈಗಾಗಲೇ ಆರ್ಡಿನೆನ್ಸ್ ತಂದುಬಿಟ್ಟಿದ್ದೀರಿ, ಅದು ಜಾರಿಯಲ್ಲಿದೆ. ಅದಕ್ಕೆ ಇವತ್ತು ಸದನ ಒಪ್ಪಿಗೆ ಕೊಡಬೇಕು. ಆ ಹಂತದಲ್ಲಿ ಈಗ ನಾವಿದ್ದೇವೆ ಒಂದು ಸಲ ಕಾನೂನು ತಿದ್ದುಪಡಿಯಾಗಿ ಒಪ್ಪಿಗೆ ಕೊಟ್ಟಮೇಲೆ, ಮತ್ತೆ ರೂಲ್ಸ್, ರೆಗ್ಯುಲೇಷನ್ಸ್ ಮಾಡಿ, ಒಂದೊಂದು ಡಿಸ್ಟ್ರಿಬ್ಯೂಟರಿಯಲ್ಲಿ ಒಂದೊಂದನ್ನು ತರಬೇಕೆಂದರೆ, ಪುನಃ 6 ತಿಂಗಳು ಅಥವಾ ಒಂದು ವರ್ಷ ಹೋಗುತ್ತೆ. ಅಷ್ಟರೊಳಗೆ ಅಲ್ಲಿ ಗಲಾಟೆಗಳು ಪ್ರಾರಂಭವಾಗುತ್ತವೆ. ಏಕೆಂದರೆ, ಇದು ಮಾಸ್. ಲಕ್ಷಾಂತರ ಇರತಕ್ಕ ರೈತರ ಸಮಸ್ಯೆ. ಇವತ್ತು ತುಂಗಭದ್ರಾ ಎಡದಂಡೆ ನಾಲೆ ವ್ಯಾಪ್ತಿಯಲ್ಲಿ ಒಬ್ಬ ರೈತ 5 ಎಕರೆ ವ್ಯವಸಾಯ ಮಾಡಿದನೆಂದರೆ, ಪ್ರತಿ ತಾಲ್ಲೂಕಿನಲ್ಲಿ 60-70 ಪರ್ಸೆಂಟ್ ನೀರಾವರಿ ಇದೆ. ಅದು ಗಂಗಾವತಿ ಇರಬಹುದು, ಸಿಂಧನೂರು ಇರಬಹುದು. ಮಾನ್ವಿ ಇರಬಹುದು, ರಾಯಚೂರು ಇರಬಹುದು. ಇಷ್ಟು ದೊಡ್ಡ ಪ್ರಮಾಣದಲ್ಲಿ ನೀರಾವರಿ ಮಾಡತಕ್ಕ ಸಂದರ್ಭದಲ್ಲಿ 15 ದಿವಸ ಮೊದಲೆ ನಮಗೆ ಕಳುಹಿಸಿದ್ದರೆ, ಇದರಲ್ಲಿ ಇರತಕ್ಕಂಥ....

ಶ್ರೀ ಹೆಚ್.ಕೆ. ಪಾಟೀಲ್ : ನೀವು ಮತ್ತೆ ಅದನ್ನೇ ರಿಪೀಟ್ ಮಾಡುತ್ತಿದ್ದೀರಿ. ನಾನು ಈ ತಿದ್ದುಪಡಿಯನ್ನು 10 ದಿವಸಗಳ ಮೊದಲೇ ಅಂದರೆ 31ನೇ ತಾರೀಖು ಮಂಡನೆ ಮಾಡಿದ್ದೇನೆ. ಅವತ್ತೇ ಇದು ತಮ್ಮ ಕೈ ಸೇರಿದೆ. ಇದಕ್ಕಿಂತ ಹೆಚ್ಚಾಗಿ ನಿಮ್ಮ ಹತ್ತಿರ ಎರಡು ಮೂರು ಆರ್ಡಿನೆನ್ಸ್ ಕಾಪಿಗಳು ಸಿಕ್ಕಿವೆ. ನಾವು 10 ದಿವಸ ಮೊದಲೇ ಕೊಟ್ಟಿದ್ದರೂ, ಪುನಃ ಅದೇ ಆಪಾದನೆ ಮಾಡಬೇಡಿ. ಏಕೆಂದರೆ, ಇದನ್ನು ಇವತ್ತು ಸಭೆಯಲ್ಲಿ ಮಂಡನೆ ಮಾಡಿದ್ದಲ್ಲ.

ಶ್ರೀ ಹಂಪನಗೌಡ ಬಾದರ್ಲಿ : ನಾನು ನಿಮ್ಮ ಮೇಲೆ ಆಪಾದನೆ ಮಾಡುತ್ತಾ ಇಲ್ಲ. ಇವತ್ತು ನನ್ನ ಕೈಗೆ ಸಿಕ್ಕಿದೆ, ಅದಕ್ಕಾಗಿ ಹೇಳುತ್ತಿದ್ದೇನೆ. ಇದರಲ್ಲಿ ನನ್ನ ಲೋಪದೋಷವು ಇರಬಹುದೆಂದೂ ತಿಳಿದುಕೊಳ್ಳುತ್ತೇನೆ. ಏಕೆಂದರೆ, ಈ ತರಹ ಸಮಸ್ಯೆಗಳು ಇರುವುದರಿಂದ ದಯವಿಟ್ಟು ನನಗೊಂದು ಅವಕಾಶ ಕೊಡಿ.

ಶ್ರೀ ಹೆಚ್.ಕೆ. ಪಾಟೀಲ್ : ನಿಮಗೆ ಅವಕಾಶ ಕೊಡುವುದಕ್ಕೆ ಇಲ್ಲ ಎನ್ನುವ ಹಾಗಿಲ್ಲ. ಒಂದು ಮಾತು ನಾವು ಹೇಳಿದ್ದೇವೆ. ಒಂದೊಂದು ಡಿಸ್ಟ್ರಿಬ್ಯೂಟರಿ ಅಥವಾ ಎರಡು ಡಿಸ್ಟ್ರಿಬ್ಯೂಟರಿ ಈ ವರ್ಷ ತೆಗೆದುಕೊಳ್ಳಿ, ಮುಂದಿನ ವರ್ಷ ಎರಡು ಡಿಸ್ಟ್ರಿಬ್ಯೂಟರಿ ತೆಗೆದುಕೊಳ್ಳಿ ಎಂದು ಹೇಳಿದರೆ, ನಾವು ಒಂದು ನೂರು ವರ್ಷದ ಕಾರ್ಯಕ್ರಮ ಹಾಕಬೇಕಾಗುತ್ತದೆ. 1995-96ರೊಳಗೆ ತಮ್ಮ ಸರ್ಕಾರ ಇದ್ದಾಗಲೇ ಕಾನೂನು ಮಾಡಿದರು. ಆದರೆ, ನಾವು ಕೆಲವು ಸಂಸ್ಥೆಗಳನ್ನು ರಚನೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆಯೇ ಹೊರತು, ಆ ಸಂಸ್ಥೆಗಳಿಗೆ ಅಥವಾ ಆ ರೈತರಿಗೆ ಅಧಿಕಾರ ವಿಕೇಂದ್ರೀಕರಣ ಮಾಡುವುದಕ್ಕೆ ಹೋಗಲಿಲ್ಲ. ಈ ಕಾನೂನು ಅಥವಾ ನಿಯಮಗಳು ಇವತ್ತು ಅಧಿಕಾರ ವಿಕೇಂದ್ರೀಕರಣ ಮಾಡುತ್ತಿವೆ. ಇವತ್ತು ಅಧಿಕಾರವನ್ನು ರೈತರಿಗೆ ಕೊಡುತ್ತಾ ಇದ್ದೇವೆ. ಇದರಲ್ಲಿ ನಿಮಗೆ ಏನಾದರೂ ತೊಂದರೆಯಾಗುವಂತಾದ್ದು ಒಂದು ಅಂಶ ಹೇಳಿ. ಇದರಿಂದ ನನ್ನ ಕ್ಷೇತ್ರದಲ್ಲಿ ತೊಂದರೆಯಾಗುತ್ತೆ ಎಂಬುದು ಯಾವುದಾದರೂ ಇದ್ದರೆ ಹೇಳಿ.

ಶ್ರೀ ಹಂಪನಗೌಡ ಬಾದರ್ಲಿ : ಇವತ್ತು ನೀವು ಇದರಲ್ಲಿ ಅಧಿಕಾರ ಕೊಟ್ಟಿದ್ದೀರಿ ನಿಜ, ನಾನು ಒಪ್ಪುತ್ತೇನೆ. ನೀರಾವರಿ ವ್ಯವಸ್ಥೆಯಲ್ಲಿ ರೈತರಿಗೆ ಅಧಿಕಾರವನ್ನು ಕೊಡುವುದನ್ನು ಈ ಕಾನೂನು ಮುಖಾಂತರ ತಂದಿದ್ದೀರಿ, ಇದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ, ಅಲ್ಲಿ ಪರಿಸ್ಥಿತಿ ಹೇಗಿದೆ ಎಂದರೆ ಕಾಲುವೆಗಳ ದುರಸ್ತಿ ಮಾಡಬೇಕಾದರೆ, ರೈತರಲ್ಲಿ ಆರ್ಥಿಕ ಪರಿಸ್ಥಿತಿ ಇಲ್ಲ.

ಶ್ರೀ ಹೆಚ್. ಕೆ. ಪಾಟೀಲ್ : ನಾವು ರಿಪೇರಿ ಮಾಡಿಸಿಕೊಡುತ್ತೇವೆಂದು ಹೇಳಿಬಿಟ್ಟರೆ, ಆ ರಿಪೇರಿ ಯಾವ ಕ್ವಾಲಿಟಿಯಲ್ಲಿ ಆಗುತ್ತದೋ ಗೊತ್ತಿಲ್ಲ. ಅದಕ್ಕೆ ನಾನೇನು ಮಾಡಬೇಕೆಂದು ವಿಚಾರ ಮಾಡಿದ್ದೇನೆಂದರೆ, ನಿಮ್ಮಂಥ ಅನೇಕ ಸ್ನೇಹಿತರುಗಳು ನನಗೆ ಸಲಹೆ ಮಾಡಿದರು. ಇರಿಗೇಷನ್ ಡಿಪಾರ್ಟ್‌ಮೆಂಟ್, ಕಾಡಾ ಆ ವ್ಯಾಪ್ತಿಯಲ್ಲಿ ಬರತಕ್ಕಂಥ ಸೊಸೈಟಿ ಹಾಗೂ ಡಿಸ್ಟ್ರಿಬ್ಯೂಟರಿ ಚೇರ್ಮನ್ ಇವರದೊಂದು ಸಮಿತಿ ಮಾಡಿ, ಹಾಲಿ ಇರತಕ್ಕಂಥ ವಾಸ್ತುಸ್ಥಿತಿಗೆ ಜಾಯಿಂಟ್ ಇನ್‌ಸ್ಪೆಕ್ಷನ್ ಮಾಡಬೇಕು. ಆ ಜಾಯಿಂಟ್ ಇನ್‌ಸ್ಪೆಕ್ಷನ್‌ನ್ನು ಆಧರಿಸಿ ನಮ್ಮ ನೀರಾವರಿ ಇಲಾಖೆಯವರು ಸಿದ್ಧ ಮಾಡತಕ್ಕ ಎಸ್ಟಿಮೇಟ್ ಮೇಲೆ, ಇರಿಗೇಷನ್ ಇಲಾಖೆಯವರು ಆ ಕೆಲಸ ಪ್ರಾರಂಭ

ಮಾಡಬೇಕು. ಅದನ್ನು ಪೂರ್ಣ ಮಾಡಿ, ಆ ಸೊಸೈಟಿಗೆ, ಆ ಏರಿಯಾವನ್ನು ಹ್ಯಾಂಡ್ ಓವರ್ ಮಾಡಬೇಕು. ಜಾಯಿಂಟ್ ಇನ್‌ಸ್ಪೆಕ್ಷನ್ ಮಾಡಬೇಕೆಂದರೆ, ಅದಕ್ಕೂ ಕೆಲವು ಕಾಲ ಬೇಕಾಗುತ್ತದೆ. ಬಹುಶಃ ನಮ್ಮ ಜಾಯಿಂಟ್ ಇನ್‌ಸ್ಪೆಕ್ಷನ್ ಎಲ್ಲಾ ಮುಗಿದು, ನಮ್ಮ ರಾಜ್ಯದೊಳಗೆ ಕನಿಷ್ಠ 5 ಲಕ್ಷ ಅಥವಾ 6 ಲಕ್ಷ ಹೆಕ್ಟೇರ್ ಭೂಮಿಯನ್ನು ಪೂರ್ತಿಯಾಗಿ ನೀರಾವರಿ ಬಳಕೆದಾರರ ಸಂಘಗಳ ವ್ಯಾಪ್ತಿಗೆ ವರ್ಗಾವಣೆ ಮಾಡಬೇಕಾದರೆ, ಇದು ಒಂದು ವರ್ಷದ ಎಕ್ಸರ್‌ಸೈಜ್ ಆಗುತ್ತದೆ. We cannot jsut do it overnight. Estimate should be based on the joint inspection of these 4 agencies. Actual estimate will be put to tender and that tender will be given to lowest bid person, who will execute the order and after this, a four-member team will visit and inspect and then hand it over to the society. ಇಲ್ಲದೇ ಹೋದರೆ ಏನಾಗುತ್ತದೆಂದರೆ, ನಮ್ಮ ಕಾಲುವೆಯೇ ಕೆಟ್ಟಿರುತ್ತೆ ಅಥವಾ ಡಿಸ್ಟ್ರಿಬ್ಯೂಟರಿಯೇ ಕೆಟ್ಟಿರುತ್ತೆ, ಆ ರೀತಿ ಕೆಟ್ಟಿರುವುದನ್ನು ನಾವು ತೆಗೆದುಕೊಳ್ಳುವುದೇ ? They refused to accept. ಅವರು ಹೇಳಿರುವುದರಲ್ಲಿಯೂ ಸತ್ಯ ಇದೆ. ಏಕೆಂದರೆ, ಒಮ್ಮೆ ಅವರು ಜವಾಬ್ದಾರಿ ತೆಗೆದುಕೊಂಡ ಮೇಲೆ, ಎಲ್ಲಾ ರೈತರಿಗೆ ಅಲ್ಲಿ ನೀರು ಮುಟ್ಟಲಿಲ್ಲವೆಂದರೆ ಆ ಚೇರ್ಮನ್ ಅಂಗಿ ಹಿಡಿದುಕೊಳ್ಳುತ್ತಾರೆ. ಆದ್ದರಿಂದ ಆ ಎಲ್ಲಾ ಪ್ರಸಂಗಗಳನ್ನು ಗಮನಿಸಿ ಈ ರೀತಿಯಾದ ಕಾಳಜಿ ವಹಿಸಬೇಕೆಂದು ನಿರ್ಣಯ ಮಾಡಿದ್ದೇವೆ.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೇ, ಈ ಬಿಲ್ಲ್‌ನ ಮುಖಾಂತರ ಅಧಿಕಾರ ಏನು ಕೊಟ್ಟಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಿದ್ದೇನೆ. ಆದರೆ ಪ್ರಾಕ್ಟಿಕಲ್ ಆಗಿ ಇರತಕ್ಕಂಥಾದ್ದಕ್ಕೂ ಮತ್ತು ಕಾನೂನಿನಲ್ಲಿ ಇರತಕ್ಕಂಥಾದ್ದಕ್ಕೂ ವ್ಯತ್ಯಾಸ ಬರುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಸಮಸ್ಯೆ ಪರಿಹಾರಕ್ಕೆ ಈ ಕಾನೂನು ಮುಖಾಂತರ ಏನಾದರೂ ಮಾಡುವುದಕ್ಕೆ ಆಗುತ್ತದೆಯೇನು ? Those are done on the basis of the rules or the administrative orders. ಈಗ ನೀವು ಹೇಳಿದಿರಿ. ಒಬ್ಬರೇ ನಿರ್ಧಾರ ಮಾಡುತ್ತಿದ್ದ ಹೇಗಾದರೂ ಸಮಸ್ಯೆ ಬಗೆಹರಿಯುತ್ತಿತ್ತು ಅಂತ. ಈಗ ಎಲ್ಲರೂ ಕೂಡ ನಿರ್ಣಯ ಮಾಡಬೇಕು, Otherwise, you oppose the decentralisation itself, ಒಬ್ಬರೇ ಮಾಡುತ್ತಿದ್ದರು. ಒಬ್ಬ ಜೂನಿಯರ್ ಇಂಜೀನಿಯರ್ ಇರಲಿ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜೀನಿಯರ್ ಇರಲಿ ಅಥವಾ ಎಕ್ಸಿಕ್ಯೂಟಿವ್ ಇಂಜಿನೀಯರ್ ಇರಲಿ ಅವನೊಬ್ಬನೇ ನಿರ್ಣಯ ಮಾಡುತ್ತಿದ್ದ ಇದುವರೆಗೂ. ಒಂದು ಡಿಸ್ಟ್ರಿಬ್ಯೂಟರ್ ಇರಲಿ ಹತ್ತು ಡಿಸ್ಟ್ರಿಬ್ಯೂಟರ್ಸ್ ಇರಲಿ ಅವನೊಬ್ಬನೆ ನಿರ್ಣಯ ಮಾಡುತ್ತಿದ್ದ. ಅವನು ಯಾವಾಗ ನೀರು ಬಿಡುತ್ತಿದ್ದ ಯಾವಾಗ ನೀರು ಬಿಡುತ್ತಿರಲಿಲ್ಲ ಎಷ್ಟು ಪ್ರಮಾಣದಲ್ಲಿ ಬಿಡುತ್ತಿದ್ದ ಎನ್ನುವುದು ತಮಗೆ ಗೊತ್ತಿದೆ. ನಿಮ್ಮ ಭೂಮಿಯಲ್ಲಿ ನೀರು ಹರಿದು ಎಷ್ಟು ಪ್ರಮಾಣದಲ್ಲಿ ಹೋಗುತ್ತಿತ್ತು ಎಷ್ಟು ನೀರು ವೇಸ್ಟ್ ಆಗುತ್ತಿತ್ತು ಎನ್ನುವುದು ಗೊತ್ತಿದೆ. ಒಬ್ಬರೇ ಮಾಡುತ್ತಿದ್ದರು. ಆದರೆ ಈಗ ಆ ರೀತಿಯಲ್ಲಿ ಆಗುವುದಿಲ್ಲ. ಒಬ್ಬ ಡಿಸ್ಟ್ರಿಬ್ಯೂಟರಿ ಛೇರ್ಮನ್ ಸುಮಾರು 15-20 ಸೊಸೈಟಿಗಳಿಗೆ ಉತ್ತರ ಹೇಳಬೇಕಾಗುತ್ತದೆ. ನೀವು ಹೇಳಿದ ಹಾಗೆ 10-15 ನಿಮಿಷದಲ್ಲಿ ಸುಮಾರು 10-15 ಎಕರೆಗಳಿಗೆ ನೀರು ಮಾಡಿಕೊಳ್ಳುತ್ತಿದ್ದೀರಿ. ಬರು ಬರುತ್ತಾ ನಾವು ಏನು ಮಾಡಬೇಕಾಗುತ್ತದೆ ಎಂದರೆ ವಾಲ್ಯುಮೆಟ್ರಿಕ್

ಮೆಸರ್‌ಮೆಂಟ್ ಮೇಲೆ ನೀರು ಕೊಡಬೇಕಾದಂತಹ ಪ್ರಸಂಗಗಳು ಬರುತ್ತವೆ. To satisfy the tail-end farmers, those are to be dealt with by administrative orders.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಚಿವರು ಹೇಳತಕ್ಕಂತ ವಿಚಾರವನ್ನು ನಾನು ಮೊದಲೇ ಹೇಳಿದ್ದೇನೆ. ಈಗ ಅಲ್ಲಿ ಇರತಕ್ಕಂಥ ಪ್ರಾಕ್ಟಿಕಲ್ ಪರಿಸ್ಥಿತಿಗೂ ಮತ್ತು ಈ ಕಾನೂನು ತಂದಿರತಕ್ಕಂಥಾದ್ದಕ್ಕೆ ವ್ಯತ್ಯಾಸ ಇದೆ. ಇದರಲ್ಲಿ ಕೆಲವೊಂದು ಸಮಸ್ಯೆಗಳು ಬರುತ್ತವೆ ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪರಿಹಾರ ಏನು ಎನ್ನುವುದನ್ನು ಕಂಡುಕೊಳ್ಳಬೇಕಾಗುತ್ತದೆ. ಇವತ್ತು ಕರ ವಿಧಿಸುವುದು ಆಗಲಿ, ಈ ಕಾಲುವೆಗಳನ್ನು ಅಭಿವೃದ್ಧಪಡಿಸುವ ಅಧಿಕಾರ ಆಗಲಿ ಅಥವಾ ದುರಸ್ಥಿ ಮಾಡುವ ಅಧಿಕಾರ ಆಗಲಿ ನೀರು ಸರಬರಾಜು ಮಾಡತಕ್ಕಂಥ ಅಧಿಕಾರ ಎಲ್ಲವನ್ನು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ತಾವು ಕೊಟ್ಟಿದ್ದೀರಿ, ಇದು ಸಂತೋಷದ ವಿಚಾರ ಆದರೆ ಇದರಲ್ಲಿ ಏನಾಗಿದೆ ಅಂದರೆ ಅಷ್ಟು ಪರಿಪೂರ್ಣವಾಗಿ ರೈತರು ಇಲ್ಲ. ರೈತರು ನೀರು ಹರಿಸಿಕೊಳ್ಳುವುದರಲ್ಲಿ ಮಾತ್ರ ತಜ್ಞರಾಗಿರಬಹುದು. ನಮ್ಮಲ್ಲಿ ರೈತರ ಪರಿಸ್ಥಿತಿ ಹೇಗಿದೆ ಅಂದರೆ ಈಗ ಇರುವ ಕಾನೂನನ್ನು ಅರಿತುಕೊಂಡು ಈ ಕಾನೂನಿನ ಪರಿಸ್ಥಿತಿಗೆ ಅನುಗುಣವಾಗಿ ರೈತರು ವ್ಯವಸಾಯ ಮಾಡಬೇಕಾದರೆ ಕೆಲವು ಸಮಸ್ಯೆಗಳು ಬರುತ್ತವೆ. ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ವಿದ್ಯಾಭ್ಯಾಸ ಶೇಕಡ 29 ಪರ್ಸೆಂಟ್ ಮಾತ್ರ ಇದೆ. ಇದನ್ನು ಅರಿತುಕೊಂಡು ಆ ಒಂದು ಪದ್ಧತಿಯನ್ನು ಅಳವಡಿಸಿಬೇಕಾದರೆ 3-4 ವರ್ಷಗಳಾಗುತ್ತದೆ. ಇದರಿಂದ ಪರಿಣಾಮ ಏನಾಗಬಹುದು ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸುಮಾರು 40 ವರ್ಷಗಳಿಂದ ಒಂದು ಪದ್ಧತಿಯನ್ನು ಅಳವಡಿಸಿಕೊಂಡು ವ್ಯವಸಾಯ ಮಾಡುತ್ತಿರುವ ರೈತರಿಗೆ ಸಡನ್ ಆಗಿ ನಾವು ಹೋಗಿ ಇಲ್ಲ ಈ ಹೊಸ ಕಾನೂನು ಪ್ರಕಾರ ನಾವು ವ್ಯವಸಾಯ ಮಾಡೋಣವೆಂದು ಹೇಳಿದರೆ ಕೆಲವು ಸಮಸ್ಯೆಗಳು ಉದ್ಭವವಾಗುತ್ತವೆ. ಆದ್ದರಿಂದ ನಾನು ಹೇಳತಕ್ಕಂಥಾದ್ದು ಏನೆಂದರೆ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು ಅಥವಾ ಎರಡೋ ಡಿಸ್ಟ್ರಿಬ್ಯೂಟರ್‌ಗಳನ್ನು ತೆಗೆದುಕೊಂಡು ಮಾಡಿದರೆ ಒಳ್ಳೆಯದು. ಇದನ್ನು ಒಂದು ವರ್ಷದಲ್ಲಿ ಮಾಡಬಹುದು. ರೈತರ ಇವತ್ತಿನ ಪದ್ಧತಿ ಏನಿದೆ ಆ ಪದ್ಧತಿಯನ್ನು ಬದಲಾವಣೆ ಮಾಡಬೇಕಾದರೆ ಇವತ್ತು ಮೇಲ್ಭಾಗದಲ್ಲಿರತಕ್ಕಂಥ ಸಹಕಾರ ಸಂಘಗಳು ಮತ್ತು ಡಿಸ್ಟ್ರಿಬ್ಯೂಟರಿಗಳು ಮತ್ತು ಸಬ್ ಡಿಸ್ಟ್ರಿಬ್ಯೂಟರಿಗಳು 12 ನೂರು ಎಕರೆಗಳಿಗೆ ಒಂದು ಸಹಕಾರ ಸಂಘವನ್ನು ತಾವು ರಚನೆ ಮಾಡಿದ್ದೀರಿ. 12 ನೂರು ಎಕರೆಗಳಿಗೆ ಮೇಲ್ಭಾಗದಲ್ಲಿರತಕ್ಕಂಥವರು ಸಂಪೂರ್ಣವಾಗಿ ನೀರನ್ನು ಬಳಸಿಕೊಳ್ಳುತ್ತಾರೆಂದು ತಾವು ತಿಳಿದುಕೊಳ್ಳಿ. ಈ ಮಧ್ಯೆ ಭಾಗದಲ್ಲಿರತಕ್ಕಂಥವರಿಗೆ ನೀರಿನ ಕೊರತೆಯಾದಾಗ ಎನಪ್ಪ ನೀವು ನೀರು ಹರಿಸಿಕೊಂಡಿದ್ದೀರಿ ನಿಮಗೆ ನೀರು ಕೊಡುವಂತೆ ಇಲ್ಲ ಇನ್ನೂ ನನ್ನದು 5 ಎಕರೆ ನೀರು ಹರಿಸುವುದು ಇದೆ ಅದನ್ನು ಹರಿಸಿದ ಮೇಲೆ ನಾನು ನೀರು ಕೆಳಗೆ ಬಿಡುತ್ತೇನೆಂದು ಹೇಳುತ್ತಾನೆ. ಇದು ಪ್ರಾಕ್ಟಿಕಲ್ ಆಗಿರತಕ್ಕಂಥ ವಿಚಾರ. ಕೊನೆ ಭಾಗದಲ್ಲಿರತಕ್ಕಂಥ ಸಹಕಾರಿ ಸಂಘಕ್ಕೆ ಏನಾಗುತ್ತದೆ ಅಂದರೆ ಮೇಲ್ಭಾಗದಲ್ಲಿರತಕ್ಕಂಥ ಸಹಕಾರಿ ಸಂಘಗಳು ನೀರು ಹರಿಸಿಕೊಂಡು ಬಿಟ್ಟಮೇಲೆ ಕೊನೆ ಭಾಗದ ಸಹಕಾರ ಸಂಘಕ್ಕೆ ನೀರು ಹೋಗುತ್ತದೆ. ಈ ರೀತಿಯಾದ ಕೆಲವು ಸಮಸ್ಯೆಗಳು ಇವೆ. ಆ ಸಮಸ್ಯೆಗಳನ್ನು ಯಾವ ರೀತಿ ಬಗೆಹರಿಸಬಹುದು ಎನ್ನುವುದನ್ನು ಸಹ ತಾವು ಹೇಳಿದ್ದೀರಿ. ಇಲ್ಲ ಅಂತ

ನಾನು ಹೇಳುವುದಿಲ್ಲ. ತಾವು ಮಾತನಾಡುವಾಗ ಈ ಸಮಸ್ಯೆಗಳನ್ನು ಬಗೆಹರಿಸಲು ನಾವು ರೂಲ್ಸ್ ಮಾಡುವಾಗ ತಮ್ಮನ್ನು ಕರೆದು ಮಾತನಾಡುತ್ತೇನೆಂದು ಹೇಳಿದ್ದೀರಿ. ಅದನ್ನು ನಾನು ಒಪ್ಪುತ್ತೇನೆ. ಅದರೆ ಇದರ ಬಗ್ಗೆ ತಾವು ಸ್ವಲ್ಪ ಸವಿಸ್ತಾರವಾದ ಒಂದು ಚಿಂತನೆಯಾಗಿ ಈ ಸದನದಲ್ಲಿ ಇದಕ್ಕೆ ಒಪ್ಪಿಗೆಯನ್ನು ತೆಗೆದುಕೊಂಡರೆ ಬಹಳ ಒಳ್ಳೆಯದೆಂದು ನನ್ನ ಅನಿಸಿಕೆ.

+ ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಹಂಪನಗೌಡರು ಚರ್ಚೆಯನ್ನು ಪ್ರಾರಂಭಮಾಡಿ ಅವರೇ ಸಮಸ್ಯೆಗಳನ್ನು ಹೇಳಿ ಅವರೇ ಸಮಸ್ಯೆಗಳ ಪರಿಹಾರ ಮಾಡಿದ್ದಾರೆ. ರೈತರು ತಮ್ಮ ನೀರಾವರಿ ಪ್ರದೇಶವನ್ನು ತಾವೇ ನಿರ್ವಹಣೆ ಮಾಡತಕ್ಕಂಥಾ ಮತ್ತು ಅಲ್ಲಿ ಆಗತಕ್ಕಂಥ ತೊಂದರೆಗಳನ್ನು ತಾವೇ ನಿವಾರಣೆ ಮಾಡಿಕೊಂಡು ಮತ್ತು ನೀರಿನ ದರವನ್ನು ಅವರೇ ನಿಗಧಿಪಡಿಸುವಂತಹ ಮತ್ತು ನೀರಿನ ದರವನ್ನು ಅವರೇ ವಸೂಲಿ ಮಾಡತಕ್ಕಂಥ ಕಾನೂನು ಇದು. ಜನರಿಗಾಗಿ ಇರತಕ್ಕಂಥ ನೀರಾವರಿಯನ್ನು ಜನರೇ ಒಂದು ಸಂಘಗಳನ್ನು ಕಟ್ಟಿಕೊಂಡು ಜನರೇ ನಿರ್ವಹಣೆ ಮಾಡುವಂತಹ ಒಂದು ಅಧಿಕಾರ ಈ ಕಾನೂನಿನಲ್ಲಿದೆ. ಇದರಲ್ಲಿ ಸಮಸ್ಯೆಗಳು ಇವೆ. ಇಲ್ಲ ಅಂತ ಹೇಳುವುದಕ್ಕಾಗುವುದಿಲ್ಲ. ಅವರು ಹೇಳಿದರು. ಈಗ ಇರತಕ್ಕಂಥ ವ್ಯವಸ್ಥೆ ಬೇರೆ ಮುಂದೆ ಬರತಕ್ಕಂಥ ವ್ಯವಸ್ಥೆಯೇ ಬೇರೆ ಅಂತ. ಆದ್ದರಿಂದ ಮಾನ್ಯ ಸಚಿವರು ಹೇಳಿದರು ಎಲ್ಲೆಲ್ಲಿ ಏನೇನು ಸಮಸ್ಯೆ ಇದೆಯೋ ಅದನ್ನು ತಿಳಿದುಕೊಳ್ಳೋಣ ಅದನ್ನು ಪರಿಹಾರ ಮಾಡೋಣ, ರೂಲ್ಸ್ ಮಾಡುವಾಗ ಮಾಡೋಣ ಅಂತ ಮಾನ್ಯ ಸಚಿವರು ಹೇಳಿದ್ದಾರೆ. ಆ ಕಾರಣ ಈ ಸಹಕಾರಿ ಸಂಘಗಳನ್ನು ಮಾಡುವುದರಿಂದ ಯಾವುದೇ ಒಂದು ತೊಂದರೆ ರೈತರಿಗೆ ಆಗುವುದಿಲ್ಲ. ರೈತರಲ್ಲಿ ಸಹಕಾರಿ ಮನೋಭಾವನೆ ಬೆಳೆಸುವುದಕ್ಕೆ ಇದೊಂದು ಕಾನೂನು ಅನುಕೂಲ ಮಾಡಿಕೊಡುವಂಥಾದ್ದು ಇದೆ. ಸಹಕಾರಿಗಳಲ್ಲಿ ಸಂಯಮದ ಮನೋಭಾವನೆ ಬೆಳೆಯಬೇಕಾದರೆ ಸಂಯಮ ಬೇಕಾಗುತ್ತದೆ. ಸಂಘದಿಂದ ಸಂಘಕ್ಕೆ ಸಹಕಾರ ಬೇಕು. ವ್ಯಕ್ತಿಯಿಂದ ವ್ಯಕ್ತಿಗಳಿಗೆ ಸಹಕಾರ ಬೇಕು, ಸಹಕಾರಿ ಸಂಸ್ಥೆಗಳಲ್ಲಿ ಸಹಕಾರಿ ಇಲ್ಲದೇ ಹೋದರೆ ಸಹಕಾರಿ ವ್ಯಕ್ತಿಗಳಲ್ಲಿ ಸಹಕಾರ ಇಲ್ಲದೇ ಹೋದರೆ ಗೊಂದಲ ಉಂಟಾಗುತ್ತದೆಂದು ಮಾನ್ಯ ಸದಸ್ಯರಾದ ಹಂಪನಗೌಡರು ಹೇಳಿದರು. ಮಾನ್ಯ ಅಧ್ಯಕ್ಷರೇ ಈ ದೇಶಕ್ಕೆ ಪ್ರಜಾಪ್ರಭುತ್ವವನ್ನು ಕೊಡುವಾಗ ಮತದಾನ ಮಾಡುವಾಗ ಎಂತೆಂತಹ ಸಮಸ್ಯೆಗಳು ಉದ್ಭವವಾಗುತ್ತವೆ ಅಂತ ಬ್ರಿಟಿಷರು ಹೇಳಿದರು. ಇವರಿಗೆ ಪ್ರಜಾಪ್ರಭುತ್ವವೆಂದರೆ ಗೊತ್ತೇ? ಮತದಾನ ಮಾಡುವುದಕ್ಕೆ ಬರುತ್ತದೆಯೇ? ಯಾವುದು ಸರಿ ಯಾವುದು ತಪ್ಪು ಎನ್ನುವುದನ್ನು ವಿಚಾರ ಮಾಡುವಂತಹ ಬುದ್ಧಿವಂತಿಕೆ ಈ ದೇಶದ ಜನರಿಗೆ ಇದೆಯೇ ಎನ್ನುವ ಸಮಸ್ಯೆ ಪರಕೀಯರನ್ನು ಕಾಡುತ್ತಿತ್ತು. ಇವರು ಎಂದಿಗೂ ಸ್ವತಂತ್ರ ಭಾರತವನ್ನು ಕಟ್ಟುವುದಕ್ಕಾಗುವುದಿಲ್ಲ. ಮತದಾನ ಮಾಡುವಂತಹ ವಿಚಾರ ಬುದ್ಧಿವಂತಿಕೆ ಇವರಲ್ಲಿ ಇಲ್ಲ ಅಂತ ತಿಳಿದಿದ್ದರು. ಆದರೆ ಇವತ್ತು ಅನುಭವದಿಂದ ಏನಾಗಿದೆ? ಈ ರಾಷ್ಟ್ರದಲ್ಲಿ ವಿದ್ಯಾವಂತರು, ಬುದ್ಧಿವಂತರು ಇದ್ದರೂ ಇವರ ಜೊತೆಯಲ್ಲಿಯೇ ಹೆಬ್ಬೆಟ್ಟಿನ ಜನ ಇದ್ದರೂ ಕೂಡ ಈ ರಾಷ್ಟ್ರದಲ್ಲಿ ಯಾರನ್ನು ತನ್ನ ಪ್ರತಿನಿಧಿಯನ್ನಾಗಿ ಆರಿಸಿಕೊಳ್ಳಬೇಕೆನ್ನುವ ಬುದ್ಧಿಶಕ್ತಿ ಅವನಿಗೆ ಅನುಭವದಿಂದ ಬಂದಿದೆ. ಈ ಕಾನೂನನ್ನು ಜಾರಿಗೆ ಕೊಟ್ಟಾಗ ಸಮಸ್ಯೆಗಳು ಉದ್ಭವವಾದಾಗ ಸರ್ಕಾರ ಆಗಾಗ ಆ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡು ಮತ್ತು ಜನಪ್ರತಿನಿಧಿಗಳು ಮಂತ್ರಿಗಳ ಗಮನಕ್ಕೆ ಸಮಸ್ಯೆಗಳನ್ನು ತಂದಾಗ

ಅವುಗಳನ್ನು ಸರಿಪಡಿಸಿಕೊಂಡು ಸುಗಮವಾದ ಮಾರ್ಗವನ್ನು ನಾವು ಕಂಡು ಹಿಡಿಯುವುದಕ್ಕೆ ಈ ಕಾನೂನನ್ನು ಪಾಸ್ ಮಾಡಿ ಜಾರಿಗೆ ಕೊಟ್ಟಾಗ ಅದರ ಸಂಪೂರ್ಣವಾದಂತಹ ಪ್ರಯೋಜನ ಜನತೆಗೆ ಸಿಗುತ್ತದೆ. ಇದುವರೆಗೂ ನಮ್ಮ ರೈತರಲ್ಲಿ ಏನಿತ್ತು ಅಂದರೆ ನೀರು ಇಲ್ಲ, ಕಾಲುವೆ ಹಾಳಾಗಿದೆ ಎಂದರೆ ಸರ್ಕಾರದ ಜವಾಬ್ದಾರಿ ಇತ್ತು. ಯಾರಾದರೂ ಆ ಕಾಲುವೆಯನ್ನು ಹೊಡೆದರೆ ಎಕೆ ಹೊಡೆಯುತ್ತಿರುವೆ ಅಂತ ನಮ್ಮ ರೈತರು ಕೇಳುತ್ತಿರಲಿಲ್ಲ. ಆದರೆ ಇವತ್ತು ಅವರದ್ದೆ ಜವಾಬ್ದಾರಿ, ಅವರೇ ಅಧ್ಯಕ್ಷರು, ಆ ನೀರಾವರಿ ಕಾಲುವೆಗಳ ಮೇಲ್ವಿಚಾರಣೆ ನಿಯಂತ್ರಣ ಅವರಿಗೆ ಇರುವುದರಿಂದ ಒಬ್ಬರಿಗೊಬ್ಬರಲ್ಲಿ ಜವಾಬ್ದಾರಿ ಹೆಚ್ಚುತ್ತದೆ. ಈಗ ಜವಾಬ್ದಾರಿ ಇಲ್ಲ. ಜವಾಬ್ದಾರಿ ಇಲ್ಲದ್ದಕ್ಕಾಗಿ ನಿರ್ವಹಣೆ ಸರ್ಕಾರ ಎಷ್ಟರಮಟ್ಟಿಗೆ ಮಾಡುತ್ತಿತ್ತು ಎನ್ನುವುದು ಗೊತ್ತಿದೆ. ಕಾಲುವೆಗಳು ಹಾಳಾಗಿವೆ. ಸರಿಪಡಿಸಿದ ಕಾಲುವೆಗಳನ್ನು ಉಳಿಸಿಕೊಳ್ಳುವುದು ಸಹ ನಮ್ಮ ರೈತರ ಕೈಯಲ್ಲಿ ಇರಲಿಲ್ಲ. ಅದಕ್ಕಾಗಿ ಇವತ್ತು ಅವರಿಗೆ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಕರ್ತವ್ಯ ಅದರ ಜೊತೆಯಲ್ಲಿವೆ, ಅವರು ನಿರ್ವಹಣೆ ಮಾಡಬೇಕಾದರೆ ಹಕ್ಕು ಮತ್ತು ಬಾಧ್ಯತೆಗಳು ಇದರಲ್ಲಿ ಇವೆ. ಅತ್ಯುತ್ತಮವಾದ ಕಾನೂನನ್ನು ಈ ರಾಜ್ಯಕ್ಕೆ ಕೊಡಲು ಮಾನ್ಯ ನೀರಾವರಿ ಸಚಿವರು ಉದ್ದೇಶಿಸಿದ್ದಾರೆ ಅವರ ಉದ್ದೇಶ ಬಹಳಷ್ಟು ಒಳ್ಳೆಯದು ಇದೆ ಕಾರ್ಯಾಚರಣೆಯಲ್ಲಿ ಅಲ್ಪಸ್ವಲ್ಪ ತೊಡಕುಗಳು ಇದ್ದಿದ್ದನ್ನು ಸಮಸ್ಯೆಗಳು ಬಂದಾಗ ಅವುಗಳನ್ನು ನಿವಾರಣೆ ಮಾಡಿಕೊಳ್ಳುವುದಕ್ಕಾಗಿ ಸಾಧ್ಯವಿದೆ. ನಾನು ತಮ್ಮ ಮೂಲಕ ಸ್ನೇಹಿತರಿಗೆ ಹೇಳುತ್ತೇನೆ ಆದಷ್ಟು ಬೇಗ ಈ ಕಾನೂನು ಜಾರಿಗೆ ಕೊಡೋಣ. ಸಮಸ್ಯೆಗಳು ಬಂದ ಬಂದ ಹಾಗೆ ಪರಿಹಾರ ಮಾಡಿ ರೈತರಿಗೆ ನೀರಾವರಿ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಇದೊಂದು ದಾರಿದೀಪವಾಗಲಿ ಅಂತ ಹೇಳಿ ಈ ಕಾನೂನನ್ನು ನಾನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅಧ್ಯಕ್ಷರೇ ಇತ್ತೀಚಿನ ದಿನಗಳಲ್ಲಿ ನೀರು ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಕಾರಣ ಇತ್ತೀಚೆಗೆ ಕುಡಿಯುವ ನೀರಿಗೆ ಮತ್ತು ರೈತರಿಗೆ ಬಹಳ ದುರ್ಲಬವಾಗುತ್ತಿದೆ. ಈ ವರ್ಷ ರಾಜ್ಯದಲ್ಲಿ ಉತ್ತಮ ಮಳೆಯಾಗಿ ರೈತರಿಗೆ ಅಲ್ಲಲ್ಲಿ ತೊಂದರೆಯಾಗಿರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಆದರೆ ಕಳೆದ ಹತ್ತಾರು ವರ್ಷಗಳಲ್ಲಿ ಈ ನೀರಿಗೆ ನಾವು ಬಹಳ ಕಷ್ಟಪಟ್ಟಿರುವುದನ್ನು ಸಹ ನೋಡಿದ್ದೇವೆ ಇದಕ್ಕೆ ಕಾರಣ ನೀರಿನ ನಿರ್ವಹಣೆ ಸರಿಯಾಗಿಲ್ಲದೆ ಇದುದ್ದೇ ಕಾರಣ.

5.50 ಪಿಎಂ

ನೀರಿಗೋಸ್ಕರ ರೈತರು ಅನೇಕ ರೀತಿಯಲ್ಲಿ ತೊಂದರೆ ಪಡುತ್ತಿರುವುದನ್ನು ನಾವುಗಳು ನೋಡುತ್ತಿರುತ್ತೇವೆ. ನೀರಿಗೋಸ್ಕರ ಅಲ್ಲಲ್ಲಿ ಹೊಡೆದಾಟಗಳು ಆಗುತ್ತಿರುವುದನ್ನು ಕೂಡ ಕೇಳಿದ್ದೇವೆ. ನೀರಿಗೋಸ್ಕರ ಮರ್ಡರ್‌ಗಳು ಆಗಿರತಕ್ಕಂಥ ನಿದರ್ಶನಗಳು ಕೂಡ ನಮ್ಮಲ್ಲಿವೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನಮ್ಮ ಸರಕಾರದವರು ನೀರಿನ ಬಗ್ಗೆ ಒಂದು ಕಾನೂನನ್ನು ತರತಕ್ಕಂಥಾದ್ದರ ಬಗ್ಗೆ ಇಟ್ಟ ಹೆಜ್ಜೆಯು ನಿಜವಾಗಿಯೂ ಒಂದು ಕ್ರಾಂತಿಕಾರಕ ಹೆಜ್ಜೆ ಎಂದು ಹೇಳಬೇಕಾಗುತ್ತದೆ. ಇರಿಗೇಷನ್ ಆಕ್ಟ್‌ಗೆ ತಂದಿರತಕ್ಕಂಥ ತಿದ್ದುಪಡಿಯನ್ನು ನಾವು ಸಮಗ್ರವಾಗಿ ಓದಿದಾಗ ರೈತರಿಗೆ ತೊಂದರೆಯಾಗತಕ್ಕಂಥ

ಅಥವಾ ಅವರಿಗೆ ಆತಂಕ ಮೂಡಿಸುವಂತಹ ವಿಷಯಗಳು ಯಾವುವೂ ತಿದ್ದುಪಡಿಯಲಿಲ್ಲ. ಆದ್ದರಿಂದ ತಿದ್ದುಪಡಿಗೆ ವಿರೋಧ ವ್ಯಕ್ತಪಡಿಸತಕ್ಕಂಥ ಅಥವಾ ಭಿನ್ನಮತವನ್ನು ವ್ಯಕ್ತಪಡಿಸತಕ್ಕಂಥ ಯಾವುದೇ ವಿಷಯಗಳು ಇಲ್ಲದಿರುವುದರಿಂದ ಇದಕ್ಕೆ ನಾವು ಒಮ್ಮತದ ಒಪ್ಪಿಗೆಯನ್ನು ಕೊಡಬೇಕಾಗುತ್ತದೆ. ಇದುವರೆಗೆ ನಾವು ರೈತರುಗಳಿಗೆ ಒಂದು ಜವಾಬ್ದಾರಿಯನ್ನು ನಿಗದಿ ಮಾಡಿರಲಿಲ್ಲ. ನಾವು ಕೂಡ ರೈತರಾಗಿ ಜಮೀನಿನಲ್ಲಿ ನೋಡುವಾಗ ನೀರು ಎಲ್ಲಿಯೋ, ಯಾರದ್ದೋ ಗದ್ದೆಗಳಲ್ಲಿ ಹೋಗುತ್ತಾ ಇರುತ್ತದೆ. ಅದರಿಂದಾಗಿ ನನಗೆ ಸಿಕ್ಕಿತು, ನನಗೆ ಸಿಗಲಿಲ್ಲ, ಎಂಬಿತ್ಯಾದಿ ಸಮಸ್ಯೆಗಳು ಬಂದು ಹೊಡೆದಾಟ, ಬಡಿದಾಟಗಳು ಆರಂಭವಾಗುತ್ತಿದ್ದುವು. ಅದೇ ರೀತಿಯಲ್ಲಿ ಅವಶ್ಯಕತೆಗಿಂತ ಹೆಚ್ಚಾಗಿ ನೀರನ್ನು ಬಿಡತಕ್ಕಂಥದ್ದನ್ನು ಕೂಡ ನಾವು ನೋಡಿದ್ದೇವೆ. ಆದ್ದರಿಂದ ತಿದ್ದುಪಡಿಯಲ್ಲಿ ಸೂಕ್ತ ರೀತಿಯ ನಿರ್ವಹಣೆ, ಮೈನ್‌ಟೆನೆನ್ಸ್ ಜವಾಬ್ದಾರಿ ಮುಂತಾದವುಗಳನ್ನು ರೈತರಿಗೆ ಕೊಡತಕ್ಕಂಥದ್ದು ತುಂಬಾ ಸ್ತುತ್ಯಾರ್ಹ ಕೆಲಸವಾಗಿದೆ. ಇದು ಸ್ವಾಗತಾರ್ಹ ವಿಚಾರವಾಗಿದೆ. ಹಾಗಾಗಿ ರೈತರಿಗಾಗಿ, ರೈತರಿಗೋಸ್ಕರ, ರೈತರಿಗೆ ಸಹಕಾರ ಸಂಘಗಳನ್ನು ಉಂಟು ಮಾಡಿ ಅವರಿಗೆ ಒಂದು ಜವಾಬ್ದಾರಿಯನ್ನು ಫಿಕ್ಸ್ ಮಾಡಿ ಕೊಡುವುದರಿಂದ ಅದು ಬಹಳ ಉಪಯುಕ್ತವಾಗುತ್ತದೆ. ಇದರಲ್ಲಿರುವ ಇನ್ನೊಂದು ಕ್ರಾಂತಿಕಾರಿ ವಿಚಾರವೆಂದರೆ ರೈತರಿಗೆ ಈ ಮೂಲಕ ಕಾನೂನಿನ ಶಕ್ತಿಯನ್ನು ಕೊಟ್ಟು ಯಾರೇ ಒಬ್ಬ ರೈತರು ಕಾನೂನಿನ ವೈಲೇಶನ್ ಮಾಡಿದರೆ ಅವರಿಗೆ ಸೂಕ್ತ ಶಿಕ್ಷೆಯನ್ನು ಕೊಡತಕ್ಕಂಥಾದ್ದನ್ನು ಕೂಡ ಮಾಡಿರುವುದು ತುಂಬಾ ಒಳ್ಳೆಯ ವಿಚಾರ. ಒಟ್ಟಿನಲ್ಲಿ ರೈತರು ನೀರಿನ ನಿರ್ವಹಣೆಯ ವಿಚಾರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಜವಾಬ್ದಾರಿಯಿಂದ ನೀರನ್ನು ಬಳಸಿಕೊಳ್ಳುವುದಕ್ಕೆ ಈ ತಿದ್ದುಪಡಿಯು ಒಳ್ಳೆಯ ಸದವಕಾಶವನ್ನು ಒದಗಿಸಿಕೊಟ್ಟಿದೆ. ಸನ್ಮಾನ್ಯ ಭಾರೀ ನೀರಾವರಿ ಸಚಿವರು ಅತ್ಯುಪಯುಕ್ತವಾದ ಕಾನೂನು ತಿದ್ದುಪಡಿಯನ್ನು ಈ ವಿಚಾರದಲ್ಲಿ ತಂದಿದ್ದಾರೆ. ಇದನ್ನು ನಾವು ತುಂಬು ಮನಸ್ಸಿನಿಂದ ಸ್ವಾಗತಿಸುತ್ತೇವೆ. ಇನ್ನೊಂದು ಪ್ರಮುಖ ವಿಚಾರವೆಂದರೆ ಮೈನರ್ ಇರಿಗೇಶನ್ ಟ್ಯಾಂಕ್‌ಗಳಲ್ಲಿ ಸಣ್ಣ ಸಣ್ಣ ರಿಪೇರಿ ಕೆಲಸಗಳನ್ನು ಸಕಾಲದಲ್ಲಿ ಮಾಡದೆ ಇರುವುದರಿಂದ ಜನರು ತುಂಬಾ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಇದರಿಂದಾಗಿ ನೂರಾರು ಎಕರೆ ಪ್ರದೇಶದ ಜಮೀನಿಗೆ ನೀರು ಒದಗಿಸುವಲ್ಲಿ ವಂಚನೆ ಮಾಡುವ ಪರಿಸ್ಥಿತಿಯು ಉಂಟಾಗುತ್ತದೆ. ಉದಾಹರಣೆಗೆ ಒಂದು ಸಣ್ಣಫೀಡರ್ ಚಾನಲ್ ಏರಿಯಾ ರಿಪೇರಿಯಾಗಲಿಲ್ಲ, ಕೆರೆಗೆ ನೀರು ಬಾರದೆ ಇರುವುದು ಅಥವಾ ಡಿಸ್ಟ್ರಿಬ್ಯೂಟರಿ ಚಾನೆಲ್ ರಿಪೇರಿಯಾಗದೇ ಇರುವುದು, ಮುಂತಾಗಿ ಆಗುತ್ತಿರುವುದರಿಂದ ಆ ಭಾಗದ ರೈತರಿಗೆ ನೀರು ಸಿಗದೆ ವಂಚಿತರಾಗುವ ಸಂದರ್ಭಗಳು ಆಗಾಗ ಕಾಣುತ್ತಿದ್ದೇವೆ. ಇದಾದ ನಂತರ ರೈತರು ಸರಕಾರಕ್ಕೆ ಮನವಿ ಮಾಡಬೇಕು, ಸಂಬಂಧಪಟ್ಟ ಇಂಜಿನೀಯರ್ ಬರಬೇಕು, ಅವರು ಪ್ಲಾನ್ ಮಾಡಬೇಕು, ಎಸ್ಟಿಮೇಟ್ ಮಾಡಬೇಕು, ಅದನ್ನು ಅವರು ಸರಕಾರಕ್ಕೆ ಕಳುಹಿಸಿ ಅದನ್ನು ಮಂಜೂರು ಮಾಡಿಸಿಕೊಳ್ಳಬೇಕು, ಹಣ ಸಾಂಕ್ಷನ್ ಆಗಿ ಅದು ಬಂದು ರಿಪೇರಿ ಕೆಲಸ ಆಗಬೇಕು. ಇಷ್ಟು ಕೆಲಸಗಳು ಆಗುವಾಗ ಆ ವರ್ಷದ ಬೆಳೆ ರೈತರಿಗೆ ಸಿಗುವುದಿಲ್ಲ. ಇದನ್ನೆಲ್ಲಾ ಗಮನದಲ್ಲಿಟ್ಟು ಕೊಂಡು ಸರಕಾರದವರು ಈ ಎಲ್ಲಾ ನಿರ್ವಹಣೆಗಳನ್ನು ಸಹಕಾರ ಸಂಘಗಳ ಕೈಗೆ ಕೊಟ್ಟುಬಿಟ್ಟಿದ್ದಾರೆ. ಅದು ಅವರ ಜವಾಬ್ದಾರಿ ಆಗುತ್ತದೆ. ಯಾವುದೇ ತೊಂದರೆಗಳು ಬಂದಾಗ ಸಹಕಾರಿ ಸಂಘಗಳು ರೈತರ ನೆರವಿಗೆ ಬಂದು ತತ್‌ಕ್ಷಣವೇ

ಅನುಕೂಲ ಮಾಡಿಕೊಡುವ ಸದವಕಾಶವನ್ನು ಈ ತಿದ್ದುಪಡಿಯಲ್ಲಿ ಅಳವಡಿಸಲಾಗಿದೆ. ರೈತರು ಗ್ರಾಮಾಂತರಗಳಲ್ಲಿ ಎದುರಿಸುತ್ತಿರುವ ಅನೇಕ ಸಮಸ್ಯೆಗಳನ್ನು ನಮ್ಮಷ್ಟಕ್ಕೆ ನಾವೇ ನಿರ್ವಹಣೆ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿರುವುದಕ್ಕೆ ಹಾಗೂ ರೈತರು ಆರ್ಥಿಕವಾಗಿ ಸದೃಡರಾಗುವುದಕ್ಕೆ ಇದರಲ್ಲಿನ ಅವಕಾಶಗಳನ್ನು ಗಮನಿಸಬೇಕಾಗುತ್ತದೆ. ಸಹಕಾರ ಸಂಘಗಳಿಗೆ ಆರ್ಥಿಕ ಸದೃಢತೆಯನ್ನು ಒದಗಿಸಿಕೊಡುವ ಬಗ್ಗೆ ಸರಕಾರದವರು ನೆರವಿಗೆ ಬರಬೇಕಾಗುತ್ತದೆ. ಜಟಿಲವಾದ, ಕಠಿಣವಾದ ಸಮಸ್ಯೆಗಳು ಬಂದಾಗ ಸರಕಾರದವರು ನೆರವಿಗೆ ಧಾವಿಸುವ ಕೆಲಸವನ್ನು ಮಾಡಬೇಕಾಗುತ್ತದೆ. ಇಂಥ ಒಂದು ಸಹಕಾರ ಸಂಘಗಳಲ್ಲಿ ಯಾವುದೇ ರೀತಿಯಲ್ಲಿ ರಾಜಕೀಯ ಬಾರದ ಹಾಗೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಇದು ಸಂಪೂರ್ಣವಾಗಿ ನೀರು ಬಳಕೆದಾರರ ಸಂಘವಾಗಬೇಕೆ ವಿನಹ ಇದು ಯಾವುದೇ ರಾಜಕೀಯ ಪಕ್ಷಕ್ಕೆ, ವರ್ಗಕ್ಕೆ, ಗುಂಪಿಗೆ ಸೇರಿರುವ ಸಂಘವಾಗಬಾರದು. ಈ ಕುರಿತಾಗಿ ಸದನಕ್ಕೆ ಇರುವ ಚಿಂತನೆಯು ಸರಕಾರಕ್ಕೂ ಕೂಡ ಇರುವುದು ತಿದ್ದುಪಡಿಯನ್ನು ನೋಡಿದಾಗ ಅರಿವಾಗುತ್ತದೆ. ಆದ್ದರಿಂದ ಮಹತ್ತರವಾದ ಒಂದು ತಿದ್ದುಪಡಿಯನ್ನು ಇರಿಗೇಷನ್ ಆಕ್ಟ್‌ಗೆ ತಂದು ಅದರಲ್ಲಿ ರೈತರನ್ನು ಇನ್‌ವಾಲ್ವ್ ಮಾಡಿಕೊಂಡು ಅವರಿಗೆ ಹೆಚ್ಚು ಅನುಕೂಲವನ್ನು ಸರಕಾರದವರು ಮಾಡಿಕೊಟ್ಟಿದ್ದಾರೆ. ಭಾರೀ ನೀರಾವರಿ ಸಚಿವರು ತಂದಿರತಕ್ಕಂಥ ಈ ತಿದ್ದುಪಡಿಯನ್ನು ನಾವೆಲ್ಲರೂ ಒಗ್ಗಟ್ಟಿನಿಂದ ಸ್ವಾಗತ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವನ್ನು ಕೊಟ್ಟ ಅಧ್ಯಕ್ಷರನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಭಾರಿ ನೀರಾವರಿ ಸಚಿವರು ಸಹಕಾರ ಸಂಘಗಳ ಮೂಲಕ ನೀರಿನ ನಿರ್ವಹಣೆಯನ್ನು ರೈತರಿಗೆ ಕೊಡುತ್ತಾ ಇದ್ದಾರೆ. ಇದು ಅತ್ಯಂತ ಮಹತ್ವದ ವಿಚಾರವಾಗಿದೆ. ನಮ್ಮ ರಾಜ್ಯದಲ್ಲಿರುವ ಅನೇಕ ನೀರಾವರಿ ಪ್ರದೇಶಗಳನ್ನು ನೋಡಿದರೆ ಇಲಾಖೆಯ ದೋಷದಿಂದಾಗಿ ರೈತರು ಸಾಕಷ್ಟು ಹಾನಿಯನ್ನು ಅನುಭವಿಸುತ್ತಿದ್ದಾರೆ. ತುಂಗಭದ್ರಾ ದಂಡೆಯಲ್ಲಿ ಕೂಡ ನಮ್ಮ ರೈತರುಗಳು 30-40 ವರ್ಷಗಳಿಂದ ನೀರನ್ನು ಉಪಯೋಗ ಮಾಡುತ್ತಾ ಬಂದಿದ್ದಾರೆ. ಆದರೂ ಕೂಡ ಅಲ್ಲಿ ಸರಿಯಾದ ನಿರ್ವಹಣೆ ಇಲ್ಲದಿರುವುದರಿಂದ, ಇಲಾಖೆಯವರು ಸಕಾಲದಲ್ಲಿ ಕಾಲುವೆಗಳ ದುರಸ್ತಿ ಮಾಡುವುದಾಗಲೀ, ನೀರನ್ನು ಸುವ್ಯವಸ್ಥಿತ ರೀತಿಯಲ್ಲಿ ನೀಡುವುದಾಗಲೀ, ಮುಂತಾದುವುಗಳನ್ನು ಸರಿಯಾಗಿ ಮಾಡದೇ ಇರುವುದರಿಂದ ರೈತರ ಸಾಕಷ್ಟು ಭೂಮಿಯು ಹಾಳಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇವೊತ್ತು ಈ ತಿದ್ದುಪಡಿಯ ಮೂಲಕ ನೀರಾವರಿ ನಿರ್ವಹಣೆಯನ್ನು ರೈತರುಗಳ ಮತ್ತು ಇಲಾಖೆಯ ಒಳಗೊಳ್ಳುವಿಕೆಯಿಂದ, ಕಾಡಾ ಡೆವಲಪ್‌ಮೆಂಟ್‌ನವರು ಒಳಗೊಳ್ಳುವುದರಿಂದ ಹೆಚ್ಚು ಸೂಕ್ತವಾಗಿ ಮುಂದುವರಿಯಲು ಈ ಕಾನೂನನ್ನು ಮಾನ್ಯ ಸಚಿವರು ತರುತ್ತಾ ಇದ್ದಾರೆ. ಇದೊಂದು ಉತ್ತಮವಾದ ತಿದ್ದುಪಡಿಯಾಗಿದೆ. ನಮ್ಮಲ್ಲಿ ಬ್ಲಾಕ್ ಸಾಯಿಲ್ ಭೂಮಿ ಏನಿದೆ, ಆ ಭೂಮಿಯು ಹಾಳಾಗಿ ಹೋಗುತ್ತಾ ಇದೆ. ನೀರಿನ ಸೂಕ್ತ ನಿರ್ವಹಣೆ ಇಲ್ಲದ ಕಾರಣ ಸಾವಿರಾರು ಎಕರೆ ಭೂಮಿಯು ಹಾಳಾಗಿ ಹೋಗುತ್ತಿದೆ. ನಮ್ಮ ರೈತರುಗಳು ತಮ್ಮ ಅನುಭವದ ನೆಲೆಯಲ್ಲಿ ಸಾಕಷ್ಟು ನೀರಾವರಿ ಮಾಡುತ್ತಾ ಇದ್ದಾರೆ. ಕಾನೂನಿನ ಮೂಲಕ ಇನ್ನೂ ಹೆಚ್ಚಿನ ಇನ್‌ವಾಲ್ವ್‌ಮೆಂಟ್ ರೈತರಿಂದ ಬರುವುದರಿಂದ ಎಲ್ಲಾ ಇಲಾಖಾ ತಜ್ಞರು ಸೇರಿ ಚಿಂತನೆ ಮಾಡಿ

ರೈತರಿಗೆ ಸರಿಯಾಗಿ ಹಾಗೂ ಸೂಕ್ತ ರೀತಿಯಲ್ಲಿ ನೀರನ್ನು ಒದಗಿಸಿಕೊಡುವ ಜವಾಬ್ದಾರಿಯನ್ನು ನಿರ್ವಹಿಸಬೇಕು. ಸರಿಯಾದ ಬೆಳೆಗಳನ್ನು ಉತ್ತಮವಾಗಿ ಬೆಳೆಯತಕ್ಕಂಥ ಜವಾಬ್ದಾರಿಯೂ ಅವರ ಮೇಲಿದೆ. ಇವೊತ್ತು ಹೆಚ್ಚು ನೀರು ಇದ್ದು ಕೂಡ ಎಷ್ಟೊ ಭೂಮಿಯು ಹಾಳಾಗಿದೆ. ಇದನ್ನೆಲ್ಲಾ ತಡೆಗಟ್ಟಲು ಸರಕಾರದವರು ತಂದಿರುವ ತಿದ್ದುಪಡಿಯು ಬಹಳ ಅತ್ಯುಪಯುಕ್ತವಾಗಿದೆ. ಇದಕ್ಕೆ ಬಹುಶಃ ಎಲ್ಲರ ಒಪ್ಪಿಗೆಯು ಸಹ ಇದೆ. ಆದರೆ ಇದರಲ್ಲಿ ಕೆಲವೊಂದು ದೋಷಗಳಿರುವುದನ್ನು ಸರಿಪಡಿಸಬೇಕಾಗುತ್ತದೆ. ದೀರ್ಘಕಾಲದಿಂದ ದೊಡ್ಡ ನೀರಾವರಿ ಪ್ರದೇಶಗಳಲ್ಲಿ ಒಂದೊಂದು ಕಡೆಯಲ್ಲಿ ಲಕ್ಷಗಟ್ಟಲೆ ಎಕರೆ ನೀರಾವರಿ ಆಗುವಂಥ ಕಡೆಗಳಲ್ಲಿ ಕೆಲವರಿಗೆ ತೊಂದರೆಯು ಆಗಬಹುದು. ಕೊನೆಯಲ್ಲಿರುವ ಜನರಿಗೆ ಅಡಚಣೆಯುಂಟಾದೀತು, ಬೇರೆ ಇತರ ತೊಂದರೆಗಳು ಬಂದಾವು ಎಂಬ ಒಂದು ಚಿಂತನೆಯು ಇಲ್ಲಿ ಬರುತ್ತಾ ಇದೆ. ಇವುಗಳೆಲ್ಲವನ್ನೂ ಅಧಿಕಾರಿಗಳು ತಜ್ಞರುಗಳು ಮುಂತಾಗಿ ಸಂಬಂಧಪಟ್ಟವರು ಕುಳಿತು ವಿಚಾರ ಮಾಡಿ ಪರಿಹಾರವನ್ನು ಕಂಡುಕೊಳ್ಳಬಹುದು. ರಾಜ್ಯದಲ್ಲಿ 3-4 ಪ್ರದೇಶದಲ್ಲಿ ನೀರಾವರಿಯು ಹೆಚ್ಚು ಇದೆ. ಅವುಗಳು ಪೂರ್ಣ ಬೆಳವಲು ಪ್ರದೇಶಗಳಾಗಿವೆ. ಅಲ್ಲಿ ಇಲ್ಲಿ ಕೇವಲ ಸಣ್ಣ ನೀರಾವರಿ ಮಾಡುವಂಥ ಪ್ರದೇಶಗಳು ಕೂಡ ಇವೆ. ಅಂಥ ಕೆನಾಲ್‌ಗಳು ಅಲ್ಲಿವೆ. ಇವೊತ್ತು ಗಡಿನಾಡು ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳು ಮತ್ತು ಭೂಮಿಯ ಗುಣಧರ್ಮಗಳು ಬೇರೆ ಆಗಿವೆ. ಈ ಎಲ್ಲಾ ಪ್ರದೇಶಗಳ ದೃಷ್ಟಿಯಿಂದ ನಾವು ಕಾನೂನು ತರುವಾಗ ಆ ಕುರಿತಾದ ಸಾಧಕ ಬಾಧಕಗಳನ್ನು ವಿಚಾರ ಮಾಡುವ ಅವಶ್ಯಕತೆಯು ಇದೆ. ನೀವು ತಂದಂಥ ಕಾನೂನಿನ ಪಾಲನೆ ಮಾಡುವಲ್ಲಿ ರೈತರ ಜವಾಬ್ದಾರಿಯ ಅವಶ್ಯಕತೆಯು ಬಹಳ ಇದೆ. ರೈತರು ಕಾನೂನಿನ ಅನುಭವ ಮಾಡಿಕೊಂಡು ಅದನ್ನು ಸದುಪಯೋಗ ಮಾಡಿಕೊಳ್ಳಬೇಕು. ಅಂತೆಯೇ ಇವೊತ್ತು ಹಾಳಾಗುತ್ತಿರುವ ನಮ್ಮ ಭೂಮಿಯನ್ನು ಸದುಪಯೋಗ ಮಾಡಿಕೊಳ್ಳಲು ಅವರು ತಮ್ಮ ಪಾಲಿನ ಕರ್ತವ್ಯವನ್ನು ಮಾಡಬೇಕಾಗುತ್ತದೆ. ಅಧಿಕಾರಿಗಳಿಗಿಂತಲೂ ಹೆಚ್ಚಾಗಿ ರೈತರು ಇದರಲ್ಲಿ ಇನ್‌ವಾಲ್ವ್ ಆಗಿ ಕೆಲಸ ಮಾಡಿದರೆ ತಮ್ಮ ಫಲವತ್ತಾದ ಭೂಮಿಯನ್ನು ಹೆಚ್ಚು ಬೆಳೆ ಬೆಳೆಯಲು ಅನುಕೂಲವಾಗುತ್ತದೆ ಮತ್ತು ಆ ಭೂಮಿಯನ್ನು ಉಳಿಸಿಕೊಳ್ಳಲು ಸಹಕಾರಿಯಾಗುತ್ತದೆ. ಆ ಕುರಿತು ರೈತರು ತಮ್ಮ ಜ್ಞಾನವನ್ನು ಹೆಚ್ಚು ಮಾಡಿಕೊಳ್ಳಬೇಕು. ಹಾಗೆಯೇ ರೈತರು ಸಹಕಾರಿ ಮನೋವೃತ್ತಿಯನ್ನು ಹೆಚ್ಚು ಬೆಳೆಸಿಕೊಳ್ಳಬೇಕಾಗಿದೆ. ಆ ದಿಕ್ಕಿನಲ್ಲಿ ಹಲವಾರು ಜನ ಮಾನ್ಯ ಸದಸ್ಯರುಗಳು ತಮ್ಮ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ರೈತರುಗಳ ಮತ್ತು ಶಾಸಕರುಗಳ ಅನುಭವದ ಸಲಹೆ ಸೂಚನೆಗಳನ್ನು ತೆಗೆದುಕೊಂಡು ಕಾನೂನಿನ ಜಾರಿ ಮಾಡಬೇಕೆಂದು ಹೇಳುತ್ತಾ, ಇದಕ್ಕೆ ಯಾರು ಕೂಡ ವಿರೋಧ ವ್ಯಕ್ತಪಡಿಸುವುದಿಲ್ಲ, ಇದೊಂದು ಸೂಕ್ತವಾದ ತಿದ್ದುಪಡಿಯಾಗಿದೆ ಎಂದು ಹೇಳಲು ಸಂತೋಷಪಡುತ್ತೇನೆ.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ : ಬಹಳ ಸೂಕ್ತವಾದ ವಿಚಾರ ಬಹುಶಃ ನೀರಾವರಿ ಮಂತ್ರಿಗಳದು ಬಹಳ ದಿವಸದ ಚಿಂತನೆ ಇದು. ಅನೇಕ ತಾಂತ್ರಿಕ ಅಭಿಪ್ರಾಯಗಳನ್ನು, ಎಲ್ಲ ಕಡೆಯಿಂದಲೂ ಅವರು ತೆಗೆದುಕೊಂಡಿದ್ದಾರೆ. ಎಲ್ಲರ ಅನುಭವದಿಂದ ಇದನ್ನು ತರಬೇಕೆಂಬ ಇಚ್ಛೆ ಅವರಿಗಿದೆ. ನಮ್ಮ ರಾಜ್ಯಕ್ಕಂತೂ ಬಹಳ ಉತ್ತಮವಾದುದು. ಇದರ ಅಗತ್ಯತೆ ಬಹಳ ಇದೆ. ಈ ಮಸೂದೆಗೆ ರೈತರಿಂದ ಕೆಲವು ಸೂಕ್ತ ವಿಚಾರ ಪಡೆದು ತಿದ್ದುಪಡಿ ತರುವುದು ಸೂಕ್ತ, ಇದನ್ನು ಎಲ್ಲರೂ ಒಪ್ಪುತ್ತಾರೆಂಬ ವಿಚಾರ ಹೇಳಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ಸದಸ್ಯರು) : ಅಧ್ಯಕ್ಷರೇ ಮಾನ್ಯ ಎಚ್.ಕೆ. ಪಾಟೀಲರು ಇವತ್ತೇನು ಈ ಬಿಲ್ ತಂದಿದ್ದಾರೆ ಬಹಳಷ್ಟು ಒಳ್ಳೆಯ ಅಂಶಗಳು ಅದರಲ್ಲಿವೆ. ಈ ರೀತಿಯ ಕಾನೂನು ತರಬೇಕು. ಅದರ ಬಗ್ಗೆ ಪ್ರಶ್ನೇನೆ ಇಲ್ಲ, ಅಲ್ಲಿ ಚರ್ಚೆಯಾಗುವಂಥದ್ದು ಇದುವರೆಗೆ ಇದ್ದ ವ್ಯವಸ್ಥೆ ಬಗ್ಗೆ. ನೀರಾವರಿ ಪ್ರದೇಶಗಳಲ್ಲಿ ರೈತರೇನು ಸಮಸ್ಯೆ ಬವಣೆಗಳನ್ನು ಅನುಭವಿಸುತ್ತಿದ್ದರು ಅಲ್ಲಿಂದ ಮುಂದೆ ಈಗ ಈ ಹೊಸ ವ್ಯವಸ್ಥೆಗೆ ನಾವು ಹೊಂದಿಕೊಂಡು ಹೋಗಬೇಕಾಗಿದೆ. ಮುಖ್ಯವಾಗಿ, ಡಿಸ್ಟ್ರಿಬ್ಯೂಟರಿಗಳ ನಿರ್ವಹಣೆ ಬಗ್ಗೆ, ಅವುಗಳ ರಿಪೇರಿ ಇರಬಹುದು ಅದೇ ಪ್ರಾಮುಖ್ಯವಾದುದು. ಏಕೆಂದರೆ ನಾನೂ ಅಲ್ಲಿ ಇಲ್ಲಿ ಸಾಕಷ್ಟು ಡಿಸ್ಟ್ರಿಬ್ಯೂಟರಿಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ರೈತರ ಜೊತೆ ನಾನು ಹೋಗಿದ್ದೆ. ಹಾಗೆ ಹೋದಾಗ ನಿರ್ವಹಣೆ ಸಲುವಾಗಿ ನೀರಾವರಿ ಇಲಾಖೆಗೆ ವರ್ಷ ವರ್ಷ ಹೊಸ ಬಜೆಟ್ ಬರುತ್ತದೆ. ಅಲ್ಲಿ ಸ್ವಲ್ಪ ರಿಪೇರಿ ಮಾಡಿದಂತೆ ಮಾಡಿ ಖರ್ಚು ಹಾಕುತ್ತಾರೆ. ಅಲ್ಲಿ ಹೂಳು ತೆಗೆದಿರುವುದಿಲ್ಲ. ಅದೂ ಯಾವಾಗ? ನೀರು ಇನ್ನೇನು ಬಿಡಬೇಕೇಂಬ ಕಾಲದಲ್ಲಿ. ಆಗ ರಿಪೇರಿ ಚಾಲೂ ಮಾಡಿ ಏನೋ ಸ್ವಲ್ಪ ಮಣ್ಣು ತೆಗೆದಂತೆ ಮಾಡಿ ಎಲ್ಲ ರಿಪೇರಿಯಾಯಿತು ಅಂತ ಹೇಳಿ ಒಂದು ಎರಡು ಲಕ್ಷ ಖರ್ಚು ಹಾಕುವುದನ್ನು ನಾವು ನೋಡಿದ್ದೇವೆ. ಇದರಿಂದ ರೈತರು ಇಲ್ಲೀವರೆಗೆ ತೊಂದರೆ ಅನುಭವಿಸುತ್ತಿದ್ದಾರೆ. ಆದರೆ ಇವತ್ತು ಅದರ ನಿರ್ವಹಣೆ ಜವಾಬ್ದಾರಿಯನ್ನು ಸಂಪೂರ್ಣವಾಗೇ ರೈತರಿಗೆ ಕೊಡಬೇಕೆಂಬುದು. ಅಧಿಕಾರಿ ಮತ್ತ ರೈತರ ನಡುವೆ ಎಷ್ಟೋ ಕಡೆ ಸಂಘರ್ಷಗಳಾಗಿವೆ. ಇಲ್ಲಿ ಸರಿಯಾಗಿ ನಿರ್ವಹಣೆ ಮಾಡಿಲ್ಲ, ಸರಿಯಾಗಿ ಇಲ್ಲಿ ಹೂಳು ತೆಗೆದಿಲ್ಲ, ಆಮೇಲೆ ಕಾಲುವೆ ಬಿದ್ದುಹೋಗಿತ್ತು, ಅದನ್ನು ರಿಪೇರಿ ಮಾಡಲಾಗದ ಪರಿಸ್ಥಿತಿ, ಆಮೇಲೆ ಟೇಲ್‌ಎಂಡ್ ಕಡೆ ನೀರೇ ಹೋಗಿಲ್ಲ. ಅಂದರೆ ಹಿಂದೆಯೆಲ್ಲ ರೈತರು ಅಧಿಕಾರಿಗಳ ಬಳಿ ಹೋಗಿ ಹೀಗೆ ಮಾಡಿರಿ ಅಂತ ಇನ್‌ಸಿಸ್ಟ್ ಮಾಡುತ್ತಿದ್ದರು. ಈಗ ಈ ಮಸೂದೆಯಿಂದ ರೈತರ ಮೇಲೇ ಜವಾಬ್ದಾರಿ ಕೊಡುತ್ತಿದ್ದೀರಿ. ಒಳ್ಳೆಯದು, ರೈತರಿಗೆ ಇನ್‌ವಾಲ್ವ್‌ಮೆಂಟ್ ಬರುತ್ತದೆ. ಅದು ಬರಬೇಕು ಆದರೆ ನಾಳೆ ಏನೋ ಸ್ಪರ್ಧೆ.... ನೀವು 1200 ಎಕರೆಗೆ ಒಂದು ಘಟಕ ಮಾಡುತ್ತಿದ್ದೀರಿ, ಆಗಲೇ ಹಂಪನಗೌಡರು ಹೇಳಿದರು, ಟೇಲ್‌ಎಂಡ್‌ನವರಿಗೆ ನೀರು ಬರುವುದಿಲ್ಲ, ನಡುವೆ ಇದ್ದವರಿಗೆ ಕಡಿಮೆ ಬರುತ್ತದೆ ಅಂತ. ಈಗ ಸಿಂಗ್ ಕಮಿಟಿ ಅಂತ ಏನೋ ಮಾಡುತ್ತೇವೆ ಅಂತ ಹೇಳಿದ್ದೀರಿ. ನಿರ್ವಹಣೆ ಬಂದಾಗ ಅಲ್ಲಿಗೆ ಹೋಗಿ ಸಾಲ್ವ್ ಮಾಡುವುದು. ಮೂರ್ನಾಲ್ಕು ಸಂಘಗಳ ನಡುವೆ ತಕರಾರು ಬಂದಾಗ ಅದನ್ನು ಸಾಲ್ವ್ ಮಾಡುವುದು ಆಗಬೇಕಾಗಿದೆ. ಇನ್ನು ಬಜೆಟರಿ ಅಲೊಕೇಶನ್ ಬಗ್ಗೆ ಒಂದು ಕಡೆ 5ನೇ ಕ್ಲಾಸ್‌ನಲ್ಲಿ ಏನು ಹೇಳಿದ್ದೀರಿ ಅಂದರೆ -

24ನೇ ಪ್ರಕರಣದ 1ನೇ ಉಪಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ "ಪರಂತು, ನೀರು ಬಳಕೆದಾರರ ಸಂಘಕ್ಕೆ ವಹಿಸಲಾದ ನೀರಾವರಿ ಕಾಮಗಾರಿಯ ಸಂದರ್ಭದಲ್ಲಿ ಅಂತಹ ವೆಚ್ಚಗಳನ್ನು ಒಂದು, ಸಹಕಾರಿ ಸಂಘಕ್ಕೆ ಅಂತಹ ಬಳಕೆದಾರರಿಂದ ಬರಬೇಕಾದ ಬಾಕಿ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ 1959ರ ಉಪಬಂಧಗಳಿಗನುಸಾರವಾಗಿ ವಸೂಲಿ ಮಾಡತಕ್ಕದ್ದು".

ಅಂದರೆ ಸಹಕಾರಿ ಸಂಘಕ್ಕೆ ಅಂತಹ ಬಳಕೆದಾರರಿಂದ ಬರಬೇಕಾದ ಬಾಕಿ ಎನ್ನುತ್ತೀರಲ್ಲ ಇದು ನಿರ್ವಹಣೆ ಖರ್ಚು ಏನೋ? ಇದು ಸ್ವಲ್ಪ ಕ್ಲಾರಿಫೈ ಆಗಬೇಕಾಗಿದೆ. ಇಲ್ಲಿಯವರೆಗೆ ನೀರಾವರಿ ಇಲಾಖೆ ತನ್ನ ಬಜೆಟ್‌ನಿಂದ ಖರ್ಚು ಮಾಡುತ್ತಿತ್ತು. ಆ ಹಣವನ್ನು ಅಂತಹ ಸಹಕಾರಿ ಸಂಘಗಳಿಗೇ ಮೈನ್‌ಟೆನೆನ್ಸ್ ಸಲುವಾಗಿ ಕೊಡುವಿರೋ ಹೇಗೆ? ನಾಳೆ ಆ ಶುಲ್ಕವನ್ನು ಸಂಘಗಳು ರೈತರಿಂದ ವಸೂಲು ಮಾಡುವವು, ಆ ಹಣ ಅವರೇ ಉಪಯೋಗ ಮಾಡುವುದು, ಇಲ್ಲೀವರೆಗೆ ವಸೂಲಾಗುತ್ತಿರಲಿಲ್ಲ, ಈಗ 15 ಪರ್ಸೆಂಟ್ ಲೆಸ್ ವಸೂಲಾಗುತ್ತಿದೆ ಅಂತ ಪಾಟೀಲರೇ ಹೇಳಿದಿರಿ. ಬಹುಶಃ ಇನ್ನು ಮುಂದೆ ರೈತರ ಇನ್‌ವಾಲ್ವ್‌ಮೆಂಟಿರುವುದರಿಂದ ಸರಿಯಾಗಿ ವಸೂಲಾತಿ ಆಗುವುದರಿಂದ ಅವರ ಹೊಲಗಳಿಗೆ ಸರಿಯಾಗಿ ನೀರು ಬರುವುದರಿಂದ, ಉತ್ಪತ್ತಿಯಿಂದ ಅವರ ಕೈಗೆ ಹಣ ಹುಟ್ಟಿದರೆ ಆಗ ಅವರು ಸುಲಭವಾಗಿ ರೆಗ್ಯುಲರಾಗಿ ತುಂಬಬಹುದು. ಅಂದರೆ ಈ ಉದ್ದೇಶ ಒಳ್ಳೆಯದೇ. ನಾವೆಲ್ಲ ಎಷ್ಟೋ ಸಂಘಸಂಸ್ಥೆಗಳನ್ನು ನೋಡಿದ್ದೇವೆ. ಅಂದರೆ ಅಂತಹ ಸಂಘಗಳಿಂದ ರಾಜಕೀಯ ಶಕ್ತಿ ಪಡೆಯುವಂತಹ ಪ್ರಯತ್ನ ಇಲ್ಲಿ ಬರಬಾರದೆಂಬಂತಹ ಸ್ಥಿತಿ ನಿರ್ಮಿಸಬೇಕು. ಅಂತಹ ಕಲ್ಚರನ್ನು ನಾವು ಮೊದಲೇ ಬೆಳೆಸಿಬಿಡಬೇಕು. ಅಂದರೆ ಇಂಥ ಸಂಘಗಳಲ್ಲಿ ರಾಜಕೀಯೇತರ ವ್ಯಕ್ತಿಗಳ ಇನ್‌ವಾಲ್ವ್‌ಮೆಂಟ್ ಬಂದರೆ ಇಂದಿನ ಕಲ್ಚರ್ ಆಗ ಬಹುಶಃ ಬರಲಿಕ್ಕಿಲ್ಲ. ಅದಕ್ಕೆ ಆ ಟೆಸ್ಟ್ ಮೊದಲೆ ಬೆಳೆಸಿ ಬಿಡಬೇಕು. ಆಗ ಸಂಘಗಳು ರಾಜಕೀಯ ಶಕ್ತಿಪ್ರದರ್ಶನ ಕಣ ಆಗುವುದಿಲ್ಲ. ಏಕೆಂದರೆ ರಾಜಕೀಯ ಪಕ್ಷಗಳ ಆಧಾರದ ಮೇಲೆ ಸಂಘಗಳು ಶುರುವಾದರೆ ನಾಳೆ ಒಂದಕ್ಕೊಂದಕ್ಕೆ ತಕರಾರು ಜಾಲೂ ಆಗುತ್ತದೆ. ಅವರಿಗೆ ಯಾಕೆ ನೀರು ಬಿಡಬೇಕು, ಇವರಿಗ್ಯಾಕೆ ನೀರು ಬಿಡಬೇಕು. ಏಕೆಂದರೆ ಅವರೇ ಕಂಟ್ರೋಲ್ ಮಾಡುವುದು, ಅದರಿಂದ ಸಮಸ್ಯೆ ಬರುತ್ತವೆ.

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ನೀರಾವರಿ ಸಚಿವರು) : ಅಧ್ಯಕ್ಷರೇ, ಕಲ್ಚರ್ ಡೆವಲಪ್‌ಮೆಂಟ್ ಮಾಡಬೇಕೆಂಬುದು ಬಹಳ ಸೂಕ್ತವಾದ ಸಲಹೆ. ಏಕೆಂದರೆ ಈ ಹಂತದಿಂದಲೇ ಅವುಗಳನ್ನು ನಾವು ರಾಜಕೀಯ ಸಂಘಗಳನ್ನಾಗಿ ಬೆಳೆಸಲು ಹೋದಿವಿ ಎಂದರೆ ನಮ್ಮ ದಾರೀನೇ ತಪ್ಪುತ್ತದೆ. ನಾನು ಆಗಲೇ ಹೇಳಿದೆ, 780 ಸಂಸ್ಥೆಗಳನ್ನು ಈಗಾಗಲೇ ನಾವು ನೋಂದಣಿ ಮಾಡಿದ್ದೇವೆ. 1441 ಚೀಫ್ ಪ್ರಮೋಟರುಗಳನ್ನು ನೇಮಿಸಿದ್ದೇವೆ. ಇಷ್ಟು 2000 ಮುಖ್ಯ ನಿರ್ಣಯಗಳಾದಾಗ ನನಗೆ ಬಂದಿದ್ದು ಎರಡೇ ಎರಡು ದೂರುಗಳು. ಇದರಿಂದ ನಮ್ಮ ಕಲ್ಚರ್ ಒಳ್ಳೆಯದೆಂದು ನಿಮಗೆ ಅನ್ನಿಸುವುದಿಲ್ಲವೇ? ತಮ್ಮ ಗಮನಕ್ಕೆ ತರುತ್ತೇನೆ. ನಾವು ರಿಜಿಸ್ಟ್ರೇಶನ್ ಮಾಡುವಾಗ ರಾಜಕೀಯ ಇದರಲ್ಲಿ ಬರಬಾರದು ಅಂತ ಮಾಡಿ, ಯಾವ ಸಂಘಗಳನ್ನು ರಿಜಿಸ್ಟರ್ ಮಾಡಬೇಕು? ಕೆಲವು ಕಾಡಾದವರಂತೂ ಚೀಫ್ ಪ್ರಮೋಟರ್ ಯಾರಾಗಬೇಕು ಅನ್ನುವುದನ್ನು ಗ್ರಾಮಸಭೆಯೊಳಗೆ ನಿರ್ಣಯ ಆಗಬೇಕೆಂಬ ನಿರ್ಣಯ ಇಟ್ಟುಕೊಂಡೇನೆ ಹೊರಟಿದ್ದಾರೆ. ಮೈಸೂರು ಕಾಡಾದವರು ಸ್ಪೆಸಿಫಿಕ್ಕಾಗಿ ಅದೇ ಕ್ರೈಟೀರಿಯಾದ ಮೇಲೆ ಹೋದರು. ನಮ್ಮ ಮಲಪ್ರಭಾ ಘಟಪ್ರಭಾ ಕಾಡಾದೊಳಗೆ ಆಕಸ್ಮಾತ್ ಎರಡೂಮೂರೂ ಪ್ರಪೋಸಲ್ ಬಂದವು ಅಂದರೆ ಅಲ್ಲಿ ಆ ಪ್ರಪೋಸಲ್ ಆಗ ಯಾರು ಶೇರುಬಂಡವಾಳ ಹೆಚ್ಚಿಗೆ ಕೊಟ್ಟಿರುತ್ತಾರೆ, ಹೆಚ್ಚು ಸಂಖ್ಯೆ ಸದಸ್ಯರು ಯಾರಿದ್ದಾರೆ, ಮೊದಲು ಯಾವುದು ಬಂದಿರುತ್ತದೆ- ಈ ಮೂರೂ ಕ್ರೈಟೀರಿಯಾ ಮೇಲೆ ಅಲ್ಲಿ ರಿಜಿಸ್ಟರ್ ಮಾಡಬೇಕೆಂದು ಮಾಡಿದ್ದೇವೆ.

ಶ್ರೀ ಸಿ. ಬೈರೇಗೌಡ : ಷೇರು ಬಂಡವಾಳ ವಸೂಲು ಮಾಡಲು ಅವರಿಗೆ ಹೇಗೆ ಅಧಿಕಾರ ಬರುತ್ತದೆ? ಯಾವ ಆಧಾರದ ಮೇಲೆ ಚೀಫ್ ಪ್ರಮೋಟರ್ ವಸೂಲು ಮಾಡುವರು? ಇಬ್ಬರೂ ಮೂವರೂ ಮಾಡುವುದಕ್ಕೆ ಆಗುವುದಿಲ್ಲ. ಒಂದು ಸಹಕಾರ ಸಂಘಕ್ಕೆ ಒಬ್ಬರೇ ಚೀಫ್ ಪ್ರಮೋಟರ್, ಒಬ್ಬರೇನೆ ಶೇರು ಕ್ಯಾಪಿಟಲ್ ವಸೂಲು ಮಾಡಬೇಕಾಗಿರುವುದು. ನನಗಿಂತ ಚೆನ್ನಾಗಿ ಸಹಕಾರಿ ಕಾಯಿದೆ ನಿಯಮಾವಳಿ ತಮಗೇ ಗೊತ್ತಿದೆ.

ಶ್ರೀ ಎಚ್.ಕೆ. ಪಾಟೀಲ್ : ಚೀಫ್ ಪ್ರಮೋಟರರ ಪ್ರಪೋಸಲಗಳು ಎರಡೂ ಮೂರು ಬಂದವು, ನಾವು ಸಂಸ್ಥೆ ರಿಜಿಸ್ಟರ್ ಮಾಡುತ್ತೇವೆ, ನಾವು ಇಂಥ ಕ್ಷೇತ್ರದವರು, ಈ ಕೆಳಗಿನ ಎಲ್ಲ ಜನ ನಾವು ಸದಸ್ಯರಿದ್ದೇವೆ, ಇಷ್ಟು ಶೇರನ್ನು ನಾವು ಸಂಗ್ರಹಿಸಿದ್ದೇವೆ, ನನಗೆ ಅಧಿಕೃತವಾಗಿ ಪರವಾನಗಿ ಕೊಡಬೇಕೆಂದು ಅರ್ಜಿಗಳೇನು ಬರುತ್ತವೆ ಇಂತಹ ಅರ್ಜಿಗಳು ಸಹಜವಾಗೇ ಅವರು ಪರವಾನಗಿ ಕೊಟ್ಟಮೇಲೇನೆ.

ಶ್ರೀ ಸಿ. ಬೈರೇಗೌಡ : ಇದಾದಮೇಲೆ ಒಂದು ಸಭೆಯನ್ನು ಕರೆಯಿರಿ. ಹೇಗೇಗೆ ನಡೆದಿವೆ ಎನ್ನುವುದರ ಬಗ್ಗೆ ಇಲ್ಲಿ ಮಾತನಾಡುವುದಕ್ಕಿಂತ ತಾವು ಕರೆದರೆ ಅಲ್ಲಿಗೆ ಬರುತ್ತೇವೆ, ಅಲ್ಲಿ ಮಾತನಾಡೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಮತ್ತೊಂದು ನಾನು ಕ್ಲಾರಿಫಿಕೇಷನ್ ಕೇಳುವಂಥದ್ದು ನೀರಾವರಿ ಇಲಾಖೆಯಲ್ಲಿ ಇದೊಂದು ಪರ್ಯಾಯ ವ್ಯವಸ್ಥೆಯೇ ಆಗುತ್ತದೆ. ಇಲ್ಲಿಯವರೆಗೂ ನೀರಾವರಿ ಇಲಾಖೆಯ ಅಧಿಕಾರಿಗಳು, ಇಂಜಿನಿಯರ್‌ಗಳು ಮೈನ್‌ಟೇನ್ ಮಾಡಿಕೊಂಡು ಬಂದಿದ್ದರು, ಅದಕ್ಕೆ ಇದೊಂದು ಪರ್ಯಾಯ ವ್ಯವಸ್ಥೆಯೋ? ಅಥವಾ ಇದಕ್ಕೊಂದು ಇಂಡಿಪೆಂಡೆಂಟ್ ಎಕ್ಸಿಸ್ಟೆನ್ಸ್ ಇರುತ್ತದೋ? ಅದರ ಬಗ್ಗೆ ಒಂದು ಸ್ಪಷ್ಟೀಕರಣ ಇವತ್ತು ಆಗಬೇಕಾಗಿದೆ. ನಾಳೆ ಅಲ್ಲಿ ಆ ನೀರಾವರಿ ಇಲಾಖೆಯವರ ಹಿಡಿತವೇನು? ಅವರ ಕಂಟ್ರೋಲ್ ಏನು? ಅಲ್ಲಿರುವ ಅಧಿಕಾರಿಗಳು, ಅಲ್ಲಿರುವ ಇಂಜಿನಿಯರ್ಸ್ ಅವರ ಕಂಟ್ರೋಲ್ ಈ ಸೊಸೈಟಿ ಮೇಲೆ ಇರುತ್ತದೋ? ಅಥವಾ ಈ ಸೊಸೈಟಿ ತನ್ನದೇ ಒಂದು ಚೌಕಟ್ಟಿನೊಳಗೆ ತಮ್ಮವರೇ ಇಂಜಿನಿಯರ್ಸ್, ತಮ್ಮವರೇ ನಿರ್ವಹಣೆ ಮಾಡುವಂಥವರನ್ನು ಇಟ್ಟುಕೊಂಡು ಕೆಲಸವನ್ನು ಮಾಡುತ್ತದೋ ಹೇಗೆ ಎಂಬುದರ ಬಗ್ಗೆ ಸ್ಪಷ್ಟೀಕರಣವಾಗಬೇಕಾಗಿದೆ. ನಮ್ಮ ರಾಜ್ಯದಲ್ಲಿ ಇದನ್ನು ಪ್ರಾಯೋಗಿಕವಾಗಿ ಮಾಡುತ್ತಿದ್ದಾರೋ ಅಥವಾ ಬೇರೆ ರಾಜ್ಯಗಳಲ್ಲಿಯಾದರೂ ಪ್ರಾಯೋಗಿಕವಾಗಿ ಮಾಡಿದ್ದಾರೋ? ಅದರ ಬಗ್ಗೆ ಸ್ಪಷ್ಟೀಕರಣ ಬರಲಿಲ್ಲ. ಬೇರೆ ರಾಜ್ಯದಲ್ಲಿ ಇದನ್ನು ಇಂಪ್ಲಿಮೆಂಟ್ ಮಾಡಿ ಈ ರೀತಿ ಸೊಸೈಟಿ ಬಂದು ಅಲ್ಲಿ ಸಕ್ಸಸ್ ಆಗಿದ್ದರೆ ಅಲ್ಲೇನಾದರೂ ಮತ್ತೆ ಕುಂದುಕೊರತೆಗಳೇನಾದರೂ ಇದ್ದರೆ ಅದನ್ನೂ ಕೂಡ ತಿಳಿದುಕೊಳ್ಳುವುದಕ್ಕೆ ಬರುತ್ತದೆ. ಅದನ್ನು ಸ್ಟಡಿ ಮಾಡಿ ಮಾಡಿದ್ದಾರೋ ಅಥವಾ ಇದೊಂದು ಹೊಸ ಚಿಂತನೆಯೋ ಹೇಗೆ ಎಂದು ಗೊತ್ತಾಗಬೇಕು. ಇನ್ನು ಇದರ ಬಗ್ಗೆ ಮಾತನಾಡುವುದು ಇರುವುದರಿಂದ ಸೋಮವಾರ ಮತ್ತೆ ಮುಂದುವರೆಸುತ್ತೇನೆ.

ಅಧ್ಯಕ್ಷರು : ಈಗ ಸಭೆ ಮುಗಿದು ಮತ್ತೆ ಸೋಮವಾರ 11 ಗಂಟೆಗೆ ಪ್ರಾರಂಭವಾಗುತ್ತದೆ.

(ಸದನವು ಸಂಜೆ 6 ಘಂಟೆ 11 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ 13-11-2000 ಸೋಮವಾರ ರಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು.)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.